

# ಅಧ್ಯಾಯ ೩ ಸಾಮ್ರಾಜಶಾಹಿ ರಾಜವಂಶಗಳ ಯುಗ



# ಅಧ್ಯಾಯ ೩



*ಮಹಿಷಮರ್ದಿನಿ,*
*ಐಹೊಳೆ,*
*ಬಾಗಲಕೋಟೆ*

## ಸಾರ್ವಭೌಮ ರಾಜವಂಶಗಳ ಯುಗ

ಈ ಅವಧಿಯಲ್ಲಿ, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು ಹಾಗೂ ಹೊಯ್ಸಳರು ಕರ್ನಾಟಕದಲ್ಲಿ ಬಲಿಷ್ಠ ಸಾಮ್ರಾಜ್ಯಗಳನ್ನು ನಿರ್ಮಾಣ ಮಾಡಿ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳೆರಡರ ಸುಭಿಕ್ಷತೆಗೆ ಅವಕಾಶ ಮಾಡಿಕೊಟ್ಟರು. ಅಲ್ಲಿಯತನಕ, ಕರ್ನಾಟಕದ ಅರಸರು ಕರ್ನಾಟಕದ ಗಡಿಪ್ರದೇಶಗಳ ಒಳಗೆ ಆಳ್ವಿಕೆ ನಡೆಸಿದ್ದರು. ಆದರೆ, ಈ ರಾಜವಂಶಗಳ ಆಗಮನದಿಂದ, ದಕ್ಷಿಣಪಥದ ಬಹುತೇಕ ಭಾಗದ ಮೇಲೆ ನಿಯಂತ್ರಣ ಸಾಧಿಸಲು ಇವರಿಗೆ ಸಾಧ್ಯವಾಯಿತು. ತಮ್ಮ ಸಾಮ್ರಾಜ್ಯಗಳನ್ನು ಉತ್ತರಕ್ಕೆ ಹಾಗೂ ದಕ್ಷಿಣ ಭಾರತದ ತಮಿಳುನಾಡಿನವರೆಗೂ ವಿಸ್ತರಿಸಿಕೊಂಡರು. ರಾಜಕೀಯ ಬಲ ಹಾಗೂ ಆರ್ಥಿಕ ಸಮೃದ್ಧಿಯೆಂದು ಗುರುತಿಸಲ್ಪಡುವ ಈ ಅವಧಿಯು, ಸಾಹಿತ್ಯ, ಕಲೆ ಹಾಗೂ ವಾಸ್ತು ನಿರ್ಮಾಣ ಕ್ಷೇತ್ರಗಳ ಅಭಿವೃದ್ಧಿಗೂ ಸಾಕ್ಷಿಯಾಯಿತು.

### ಬಾದಾಮಿಯ ಚಾಲುಕ್ಯರು

ಸಾಮಾನ್ಯವಾಗಿ ಡೆಕ್ಕನ್‌ನ ಇತಿಹಾಸ, ಅದರಲ್ಲೂ ವಿಶೇಷವಾಗಿ ಕರ್ನಾಟಕದ ಇತಿಹಾಸವು, ಕ್ರಿ.ಶ.೫೦೦ರ ಸುಮಾರಿಗೆ, ಬಾದಾಮಿ ಚಾಲುಕ್ಯರ ಆಳ್ವಿಕೆಯ ಪ್ರಾರಂಭದಿಂದಾಗಿ ವಿಶೇಷ ಗಮನ ಸೆಳೆದಿದೆ.ನಂತರದಲ್ಲಿ ರಾಜಧಾನಿ ಕಲ್ಯಾಣದಿಂದ ಆಳಿದ ಕಲ್ಯಾಣದ ಚಾಳುಕ್ಯರನ್ನು ಇವರಿಂದ ಪ್ರತ್ಯೇಕಗೊಳಿಸಲು ಇವರನ್ನು ಪಶ್ಚಿಮ ಚಾಲುಕ್ಯರೆಂದೂ ಕರೆಯಲಾಗಿದೆ.ಈ ರಾಜವಂಶದ ಅರಸರು, ತಮ್ಮ ರಾಜಕೀಯ ಹಾಗೂ ಸಾಂಸ್ಕೃತಿಕ

ಐಕಮತ್ಯವನ್ನು ಕಾಪಾಡಿಕೊಳ್ಳಲು ಕನ್ನಡ ಮಾತನಾಡುವ ಸ್ಥಳೀಯ ಜನರಿಗೆ ಪ್ರೇರಣೆ, ಪ್ರೋತ್ಸಾಹ ನೀಡಿದರು. ಅದೃಷ್ಟವಶಾತ್, ಅರಸರು ಅನೇಕ ಶಿಲಾಶಾಸನಗಳನ್ನು ಹಾಕಿಸಿದ್ದರಿಂದಾಗಿ ಈ ಕಾಲದ ಚರಿತ್ರೆಯನ್ನು ಪುನರ್‌ರಚನೆ ಮಾಡಬಹುದಾಗಿದೆ.

ಕ್ರಿ.ಶ.೫೦೦ರಿಂದ ೫೨೦ರವರೆಗೆ ಆಳಿದ ಜಯಸಿಂಹನು ಈ ರಾಜವಂಶದ ಪ್ರಥಮ ಅರಸನಾಗಿದ್ದನು. ಇವರು ಮಾನವ್ಯ ಗೋತ್ರಕ್ಕೆ ಸೇರಿದವರಾಗಿದ್ದು, ತಮ್ಮನ್ನು 'ಹಾರಿತಿಪುತ್ರರು' ಎಂದು ಕರೆದುಕೊಳ್ಳುತ್ತಿದ್ದರು. ಜಯಸಿಂಹನು ರಾಷ್ಟ್ರಕೂಟರ ರಾಜನಾದ ಇಂದ್ರನನ್ನು ಸೋಲಿಸಿ ಚಾಲುಕ್ಯ ರಾಜ್ಯವನ್ನು ಸ್ಥಾಪಿಸಿದನೆಂದು, ಹಲವಾರು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಅವನ ಮಕ್ಕಳಲ್ಲಿ ಒಬ್ಬನಾದ ರಣರಾಗನ ಬಗ್ಗೆ ಅಷ್ಟಾಗಿ ತಿಳಿದು ಬರುವುದಿಲ್ಲ, ಆದರೆ ಇವನ ಮಗನಾದ ಮೊದಲನೆಯ ಪುಲಿಕೇಶಿಯನ್ನು, ಬನವಾಸಿಯ ಕದಂಬರನ್ನು ಸೋಲಿಸಿ ನಂತರ, ಚಾಲುಕ್ಯ ರಾಜವಂಶದ ಆಡಳಿತವನ್ನು ಆರಂಭಿಸಿದ ಸಂಸ್ಥಾಪಕನೆಂದು ನಂಬಲಾಗಿದೆ. ಪೊಲಕೇಶಿನ್, ಪುಲಿಕೇಶಿನ್, ಪುಲುಕೇಶಿನ್ ಎಂದೂ, ಸತ್ಯಾಶ್ರಯ, ರಣವಿಕ್ರಮ, ಶ್ರೀಪೃಥ್ವೀವಲ್ಲಭ, ಶ್ರೀವಲ್ಲಭ ಮುಂತಾದ ಬಿರುದುಗಳಿಂದಲೂ ಅವನನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಆತನು ಅಗ್ನಿಸ್ತೋಮ, ವಾಜಪೇಯ, ಅಶ್ವಮೇಧ, ಮುಂತಾದ ಹಲವಾರು ಯಾಗಗಳನ್ನು ಆಚರಿಸಿದನು. ಬಾದಾಮಿಯ ಬೆಟ್ಟದ ಮೇಲಿನ, ಕಡಿದಾದ ಬಂಡೆಯ ಚಾಚು ಭಾಗದ ಮೇಲಿನ ಕ್ರಿ.ಶ.೫೪೩ರ ಶಾಸನವು ಆತನನ್ನು ಬಲಿಷ್ಠ ರಾಜನೆಂದು ಬಣ್ಣಿಸುತ್ತದೆ. ಈ ರಾಜವಂಶದ ನಂತರದ ರಾಜರು ಆತನ ಆಳ್ವಿಕೆಯನ್ನು ಹೆಮ್ಮೆಯಿಂದ ಉಜ್ವಲವಾದ ಮಾತುಗಳಲ್ಲಿ ವರ್ಣಿಸುವುದನ್ನು ಗಮನಿಸಿದಾಗ, ಅತನನ್ನು ರಾಜವಂಶದ ನಿಜವಾದ ಸ್ಥಾಪಕನೆಂದು ಪರಿಗಣಿಸಲಾಗಿತ್ತು ಎಂದು ತರ್ಕಿಸಬಹುದಾಗಿದೆ.

ಮೊದಲನೆಯ ಪುಲಿಕೇಶಿಯ ನಂತರ, ಅವನ ಮಗನಾದ ಒಂದನೆಯ ಕೀರ್ತಿವರ್ಮನು ಸಿಂಹಾಸನವನ್ನು ಏರಿ, ಕ್ರಿ.ಶ.೫೬೬–೫೯೬ರವರೆಗೆ ಆಳಿದನು. ಬಹುತೇಕ ಎಲ್ಲ ಶಾಸನಗಳಲ್ಲೂ ಅವನನ್ನು ಮಹಾರಾಜನೆಂದು ಉಲ್ಲೇಖಿಸಲಾಗಿದೆ. ಇವನು ಬಹುಸುವರ್ಣ ಹಾಗೂ ಅಗ್ನಿಸ್ತೋಮ ಯಾಗಗಳನ್ನು ಆಚರಿಸಿದನು. ಚಾಲುಕ್ಯ ಸಾಮ್ರಾಜ್ಯದ ಆಡಳಿತವನ್ನು ಸ್ಥಿರಗೊಳಿಸುವಲ್ಲಿ ಕೀರ್ತಿವರ್ಮನ ಕೊಡುಗೆಯನ್ನು ಸ್ಮರಿಸಬಹುದು. ತನ್ನ ತಂದೆಯು ಪ್ರಾರಂಭ ಮಾಡಿದ ಕದಂಬರನ್ನು ನಿಯಂತ್ರಿಸುವ ಕಾರ್ಯವನ್ನು ಮುಂದುವರಿಸಿ, ಅವರನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಚಾಲುಕ್ಯರ ಸ್ಥಿತಿಯನ್ನು ಭದ್ರಪಡಿಸಿದನು. ಈತನ ಪ್ರೇರಣೆಯಂತೆ ಬಾದಾಮಿಯ ಸುಪ್ರಸಿದ್ಧ ವೈಷ್ಣವ ಗುಹೆಯ ಕಾರ್ಯವು ಪ್ರಾರಂಭವಾಯಿತು.

ಮೊದಲನೆಯ ಕೀರ್ತಿವರ್ಮನ ನಂತರ, ಆತನ ತಮ್ಮ ಮಂಗಳೇಶನು ಸಿಂಹಾಸನವನ್ನು ಏರಿದನು. ಬಹುಶಃ ಇದಕ್ಕೆ ಕಾರಣ, ಕೀರ್ತಿವರ್ಮನ ಮಗನಾದ ಇಮ್ಮಡಿ ಪುಲಿಕೇಶಿಯು ಇನ್ನೂ ಅಪ್ರಾಪ್ತನಾಗಿದ್ದುದಾಗಿದ್ದು, ಕ್ರಿ.ಶ. ೫೯೬–೬೧೦ರವರೆಗೂ ಆಳಿದ ಮಂಗಳೇಶನು ಅತ್ಯಂತ ಬಲಿಷ್ಠ ಹಾಗೂ ಬಲಶಾಲಿ ಅರಸನಾಗಿದ್ದನು. ಕಲಚೂರಿ ಶಂಕರಗಣ ಹಾಗೂ ಬುದ್ಧವರ್ಮನ ವಿರುದ್ಧ ಹೋರಾಡಿದ್ದು ಇವನ ಮುಖ್ಯ ಯುದ್ಧಗಳು. ಅವರನ್ನು ಸೋಲಿಸುವ ಮೂಲಕ, ಉತ್ತರದ ಮಾಹಿಯವರೆಗೂ ಮಂಗಳೇಶನು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು.ಮಹಾಕೂಟ ಕಂಭ ಶಾಸನದ ಪ್ರಕಾರ, ಗಂಗೆಯ ದಡಗಳಲ್ಲಿ ವಿಜಯಸ್ತಂಭಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದ ಮಂಗಳೇಶನು ಅದನ್ನು ಬಾದಾಮಿ ಸಮೀಪದ ಮಹಾಕೂಟ ದೇವಾಲಯದ ಬಳಿ ನಿರ್ಮಿದ್ದು, ರಣವಿಕ್ರಮ, ಶ್ರೀಪೃಥ್ವೀವಲ್ಲಭ, ಪರಮಭಾಗವತ, ಉರುರಣಪರಾಕ್ರಮ ಮುಂತಾದ ಅನೇಕ ಬಿರುದುಗಳನ್ನು ಪಡೆದಿದ್ದನು. ಸಹೋದರ ಕೀರ್ತಿವರ್ಮನ ನೆನಪಿನಲ್ಲಿ, ಬಾದಾಮಿಯ ಬೆಟ್ಟದಲ್ಲಿ ಕೆತ್ತಲಾದ ಸುಪ್ರಸಿದ್ಧ ವೈಷ್ಣವ ದೇವಾಲಯದ ನಿರ್ಮಾಣಕ್ಕೆ ಕಾರಣ ಪುರುಷನಾದನು. ಕೀರ್ತಿವರ್ಮನ ಮಗನಾದ ಇಮ್ಮಡಿ ಪುಲಿಕೇಶಿಯು ಪ್ರವರ್ಧಮಾನಕ್ಕೆ ಬಂದಾಗ, ಮಂಗಳೇಶನು ರಾಜ್ಯವನ್ನು ಆತನಿಗೆ ಒಪ್ಪಿಸಲ್ಲೊಲ್ಲದೆ, ತನ್ನ ಸ್ವಂತ ಮಗನನ್ನೇ ಉತ್ತರಾಧಿಕಾರಿಯನ್ನಾಗಿ ಮಾಡಲು ನಿರ್ಧರಿಸಿದನು. ಇದನ್ನು ಗ್ರಹಿಸಿದ ಇಮ್ಮಡಿ ಪುಲಿಕೇಶಿಯು ರಾಜಧಾನಿಯನ್ನು ತೊರೆದು, ಕ್ರಿ.ಶ.೬೦೮ರಲ್ಲಿ ತನ್ನ ಹಿಂಬಾಲಕರನ್ನೊಳಗೊಂಡ ಸೈನ್ಯವನ್ನು ಆಯೋಜಿಸಿ, ಮಂಗಳೇಶನೊಂದಿಗೆ ತೀವ್ರವಾದ ಸೆಣಸಾಟ ನಡೆಸಿದನು; ಅದರಲ್ಲಿ ಮಂಗಳೇಶನು ತನ್ನ ಜೀವವನ್ನು ಕಳೆದುಕೊಂಡನು.

ತನ್ನ ಚಿಕ್ಕಪ್ಪನನ್ನು ಕೊಂದ ನಂತರ, ಇಮ್ಮಡಿ ಪುಲಿಕೇಶಿಯು ಕ್ರಿ.ಶ.೬೦೮ರಲ್ಲಿ ಚಾಲುಕ್ಯ ಸಿಂಹಾಸನದ ಮೇಲೆ ಕುಳಿತು ಕ್ರಿ.ಶ.೬೪೨ರವರೆಗೂ ಆಳಿದನು. ಬನವಾಸಿಯ ಕದಂಬರು, ತಲಕಾಡಿನ ಗಂಗರು ಹಾಗೂ ಅಳುಪರು ಸಹ ಸೋಲನ್ನು ಒಪ್ಪಿಕೊಂಡು, ಇಮ್ಮಡಿ ಪುಲಿಕೇಶಿಯ ಸಾರ್ವಭೌಮತ್ವವನ್ನು ಸ್ವೀಕರಿಸಿದರು. ಮುಂಬಯಿಯ ಬಳಿ ಇರುವ ಎಲಿಫೆಂಟಾ, ಅಂದರೆ ಪುರಿಯನ್ನು ಆಕ್ರಮಿಸಿದ್ದ ಪುಲಿಕೇಶಿಗೆ, ಕೊಂಕಣವನ್ನು ಆಳುತ್ತಿದ್ದ ಮೌರ್ಯರೂ ಶರಣಾಗತರಾದರು. ಮಾಳ್ವ ಹಾಗೂ ಲಾಟದ ರಾಜರೂ ಸಹ ಎರಡನೆಯ ಪುಲಿಕೇಶಿಯ ಸಾಮಂತರಾದರು. ಗುಜರಾತ್ ಕೂಡ ಚಾಲುಕ್ಯ ಸಾಮ್ರಾಜ್ಯದ ಭಾಗವಾಯಿತು.ಈ ವಿಜಯಗಳಿಂದ ಉತ್ತೇಜಿತನಾದ ಪುಲಿಕೇಶಿಯು, ನರ್ಮದಾವರೆಗೂ ಹೋದಾಗ, ಉತ್ತರ ಭಾರತದ ಅರಸನಾದ, ಕನೌಜ್‌ನ ಹರ್ಷವರ್ಧನನು ಆತನನ್ನು ವಿರೋಧಿಸಿದನು. ಅವರಿಬ್ಬರ ನಡುವೆ ನಡೆದ ಭೀಕರ ಕಾಳಗದಲ್ಲಿ, ಹರ್ಷನು ಅವಮಾನಿತನಾಗಿ ಹಿಮ್ಮೆಟ್ಟಬೇಕಾಯಿತು. ಇದರಿಂದ, ಪುಲಿಕೇಶಿಯು ೯೯,೦೦೦ ಗ್ರಾಮಗಳನ್ನು ಒಳಗೊಂಡ ತ್ರೈ ಮಹಾರಾಷ್ಟ್ರ ಪ್ರದೇಶಕ್ಕೆ ನಿರ್ವಿವಾದವಿಲ್ಲದೆ ಸಾಮ್ರಾಟನಾದನು. ನಂತರ ಪುಲಿಕೇಶಿಯು ಪೂರ್ವದತ್ತ ನಡೆದು, ಕೋಸಲ ಹಾಗೂ ಒರಿಸ್ಸಾಗಳನ್ನು ಕ್ರಮವಾಗಿ ಆಳಿದ ಪಡುವಂಶಿಗಳು ಹಾಗೂ ಪೂರ್ವ ಗಂಗರನ್ನು ಸೋಲಿಸಿ, ಪಿಷ್ಠಪುರ ಹಾಗೂ ಕುನಾಲ ಪ್ರದೇಶ, ಅಂದರೆ, ಆಂಧ್ರದ ಉತ್ತರ ಕರಾವಳಿಯಲ್ಲಿರುವ ಆಧುನಿಕ ಕೊಲ್ಲೇರುವನ್ನು ವಶಪಡಿಸಿಕೊಂಡನು. ನಂತರ, ಪುಲಕೇಶಿಯು ಪಲ್ಲವರ ಮೇಲೆ ಧಾಳಿ ನಡೆಸಿ, ಪಲ್ಲವ ರಾಜಧಾನಿಯಾದ ಕಂಚಿಯವರೆಗೂ

ಹೋಗಿ, ಪಲ್ಲವ ಮೊದಲನೆಯ ಮಹೇಂದ್ರವರ್ಮನನ್ನು ಸೋಲಿಸಿದನು. ರಾಜತಾಂತ್ರಿಕ ಕ್ರಮವೊಂದರಲ್ಲಿ, ಪಲ್ಲವರ ಶತ್ರುಗಳಾದ ಚೋಳ ಹಾಗೂ ಪಾಂಡ್ಯ ರಾಜರತ್ತ ಸ್ನೇಹಹಸ್ತ ಚಾಚಿದನು. ಈ ಮಾಹಿತಿಯು ಐಹೊಳೆಯ ಶಾಸನದಲ್ಲಿ ದಾಖಲಾಗಿದೆ, ಹಾಗಾಗಿ ಈ ಎಲ್ಲ ವಿಜಯಗಳನ್ನೂ, ಆ ಶಾಸನದ ಕಾಲವಾದ ಕ್ರಿ.ಶ.೬೩೪–೬೪೨ಕ್ಕೆ ಮುನ್ನ ಸಾಧಿಸಲಾಯಿತೆಂದು ಊಹಿಸಬಹುದು. ತನ್ನ ಸಹೋದರನಾದ ಧಾರಾಶ್ರಯ ಜಯಸಿಂಹನಿಗೆ ಖಾಂದೇಶ ಪ್ರದೇಶದ ಉಸ್ತುವಾರಿಯನ್ನು ನೀಡಿ, ಮತ್ತೊಬ್ಬ ಸಹೋದರ ಕುಬ್ಜ ವಿಷ್ಣುವರ್ಧನನನ್ನು ವೆಂಗಿ ಪ್ರದೇಶದ ರಾಜ್ಯಪಾಲನನ್ನಾಗಿ ನೇಮಿಸಿದನು. ನಂತರ, ಇವು ಸ್ವತಂತ್ರವಾಗಿ, ವೆಂಗಿ ಚಾಲುಕ್ಯರು ಅಥವಾ ಪೂರ್ವ ಚಾಲುಕ್ಯರ ಸಾಮ್ರಾಜ್ಯವೆಂದು ಖ್ಯಾತಿ ಪಡೆದವು. ಇಮ್ಮಡಿ ಪುಲಕೇಶಿಯ ನೇರ ನಿಯಂತ್ರಣದಡಿಯಲ್ಲಿ, ಸತ್ಯಾಶ್ರಯ ಧ್ರುವರಾಜನು ರೇವತಿ ದ್ವೀಪಗಳನ್ನು ಆಳಿದನು. ಈ ಎಲ್ಲ ವ್ಯವಸ್ಥೆಯ ಮೂಲಕ, ಚಾಲುಕ್ಯರ ವೈಭವವು ಉತ್ತುಂಗಕ್ಕೇರಿತು. ಕಾವೇರಿ ಹಾಗೂ ನರ್ಮದಾ ನಡುವಣ ಸಂಪೂರ್ಣ ಪ್ರದೇಶವನ್ನು ಆತನ ಸಾಮ್ರಾಜ್ಯವು ಒಳಗೊಂಡಿತ್ತು. ಪರ್ಷಿಯನ್ ರಾಜನಾದ ಎರಡನೆಯ ಖುಸ್ರುವಿನ ಆಸ್ಥನಕ್ಕೆ ಇಮ್ಮಡಿ ಪುಲಕೇಶಿಯು ರಾಯಭಾರಿಯನ್ನೂ ಕಳುಹಿಸಿದ್ದು, ತನ್ನ ಪರ್ಷಿಯನ್ ದೊರೆಯೂ, ರಾಯಭಾರಿಯನ್ನು ಕಳುಹಿಸುವ ಮೂಲಕ ಪ್ರತಿಯಾಗಿ ಈ ಗೌರವವನ್ನು ನೀಡಿದನು. ಈ ಅವಧಿಯಲ್ಲಿ ಚೀನೀ ಯಾತ್ರಿಕನಾದ ಹುಯನ್ ತ್ಸಾಂಗ್‌ನು ಚಾಲುಕ್ಯ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದು ರಾಜನನ್ನೂ ಹಾಗೂ ರಾಜ್ಯದ ಅಭಿವೃದ್ಧಿಯನ್ನೂ ಧಾರಾಳವಾಗಿ ಶ್ಲಾಘಿಸಿದ್ದಾನೆ.

ಆದರೆ, ಎಲ್ಲವೂ ವೈಭವೋಪೇತವಾಗಿ ನಡೆಯುತ್ತಿರುವಾಗಲೇ, ಪಲ್ಲವ ಧಾಳಿಯ ರೂಪದಲ್ಲಿ ಚಾಲುಕ್ಯ ರಾಜ್ಯದ ಮೇಲೆ ದೊಡ್ಡ ಗಂಡಾಂತರ ಬಂದೆರಗಿತು. ಪಲ್ಲವ ರಾಜನಾದ ಮೊದಲನೆಯ ನರಸಿಂಹವರ್ಮನು ತನ್ನ ತಂದೆಯ ಸೋಲಿನ ಪ್ರತೀಕಾರಕ್ಕಾಗಿ ತಯಾರಿಗಳನ್ನು ನಡೆಸಿದನು. ಮಣಿಮಂಗಳ, ಸುರಮರ ಹಾಗೂ ಪೆರಿಯಾಳಗಳಲ್ಲಿ ನಡೆದ ಯುದ್ಧಗಳಲ್ಲಿ, ಪುಲಿಕೇಶಿಯ ಸೈನ್ಯವು ಸೋಲನ್ನು ಎದುರಿಸಿತು. ಈ ಸೋಲು ಎಷ್ಟು ನಿರ್ಣಾಯಕವಾಗಿತ್ತೆಂದರೆ, ಪಲ್ಲವ ಸೇನೆಯು ಬಾದಾಮಿಗೆ ಮುತ್ತಿಗೆ ಹಾಕಿ ಗೆಲುವು ಸಾಧಿಸಿ ಶಾಸನ ಕೆತ್ತಿಸಿ, ಈ ಮಹಾನ್ ಘಟನೆಯನ್ನು ದಾಖಲಿಸಿದ್ದು ಕ್ರಿ.ಶ.೬೪೨ರಲ್ಲಿ, ಪಲ್ಲವ ನರಸಿಂಹವರ್ಮನು ವಾತಾಪಿಕೊಂಡ ಎಂಬ ಬಿರುದನ್ನು ಪಡೆದುಕೊಂಡನು. ಬಹುಶಃ, ಪುಲಿಕೇಶಿಯು ಭಗ್ನ–ಹೃದಯನಾಗಿ ಮರಣ ಹೊಂದಿದನೆಂದು ತೋರುತ್ತದೆ, ಏಕೆಂದರೆ ಈ ಯುದ್ಧದ ನಂತರ, ಆತನ ಸುದ್ದಿಯೇ ಇರಲಿಲ್ಲ.

ಕ್ರಿ.ಶ.೬೫೫ರಲ್ಲಿ, ಪುಲಿಕೇಶಿಯ ಮಗನಾದ ಮೊದಲನೆಯ ವಿಕ್ರಮಾದಿತ್ಯನು ಪಲ್ಲವರ ಹಿಡಿತದಿಂದ ಚಾಲುಕ್ಯ ಸಾಮ್ರಾಜ್ಯವನ್ನು ಬಿಡಿಸಿದನು. ಮೂರು ತಲೆಮಾರಿನ ಪಲ್ಲವರೊಡನೆ, ಅಂದರೆ ನರಸಿಂಹವರ್ಮ, ಅವನ ಮಗ ಇಮ್ಮಡಿ ಮಹೇಂದ್ರವರ್ಮ ಹಾಗೂ ಮೊಮ್ಮಗ ಮೊದಲನೆಯ ಪರಮೇಶವರ್ಮರೊಡನೆ ಯಶಸ್ವಿಯಾಗಿ ಹೋರಾಡಿದ. ಕ್ರಿ.ಶ.೬೭೦ರಲ್ಲಿ, ಪಲ್ಲವರನ್ನು ಅವರ ರಾಜಧಾನಿ ಕಂಚಿಯವರೆಗೂ ಹಿಂಬಾಲಿಸಿದನು. ಒಂದನೆಯ ವಿಕ್ರಮಾದಿತ್ಯನ ಮಗ ವಿನಯಾದಿತ್ಯ ಹಾಗೂ ಮೊಮ್ಮಗ ವಿಜಯಾದಿತ್ಯರು, ಯುದ್ಧಗಳಲ್ಲಿ ಆತನಿಗೆ ನೆರವು ನೀಡಿದರೂ, ಚಾಲುಕ್ಯರ ವೈಭವವನ್ನು ಪುನರುಜ್ಜೀವನಗೊಳಿಸಿದ ಶ್ರೇಯಸ್ಸು ಮೊದಲನೆಯ ವಿಕ್ರಮಾದಿತ್ಯನಿಗೆ ಸಲ್ಲುತ್ತದೆ.

ತನ್ನ ತಾತ ಹಾಗೂ ತಂದೆಯ ಅಡಿಯಲ್ಲಿ ವಿನಯಾದಿತ್ಯನು ಆಡಳಿತ ಹಾಗೂ ಯುದ್ಧಕೌಶಲ್ಯದಲ್ಲಿ ಉತ್ತಮ ತರಬೇತಿಯನ್ನು ಪಡೆದದ್ದರಿಂದ, ಅನುಭವೀ ರಾಜಕುಮಾರನಾಗಿದ್ದನು. ಸಿಂಹಾಸನವನ್ನು ಏರಿದ ತಕ್ಷಣವೇ, ಗೊಂದಲಗೈಯ್ಯುವ ಅಂಶಗಳನ್ನು ವಜ್ರ ಮುಷ್ಟಿಯಿಂದ ಹತ್ತಿಕ್ಕಿ, ಶಾಂತಿ ಹಾಗೂ ಸಮೃದ್ಧಿಯನ್ನು ಸ್ಥಾಪಿಸಿದನು. ಆತನು ಅನೇಕ ದೇವಾಲಯಗಳನ್ನು ನಿರ್ಮಿಸಿ ನಿರವದ್ಯ ಹಾಗೂ ಇತರ ಸಾಹಿತ್ಯಕ ಪುರುಷರಿಗೆ ಆಶ್ರಯ ನೀಡಿದನು. ತನ್ನ ಅಂತ್ಯಕಾಲದಲ್ಲಿ, ಆತನು ಪಲ್ಲವರ ವಿರುದ್ಧ ಹೋರಾಡಬೇಕಾಯಿತು. ಆತನ ಮಗನಾದ ಇಮ್ಮಡಿ ವಿಕ್ರಮಾದಿತ್ಯನು, ಇಮ್ಮಡಿ ಪಲ್ಲವ ಪರಮೇಶ್ವರವರ್ಮನ ವಿರುದ್ಧದ ಧಾಳಿಯ ಮುಂದಾಳತ್ವವನ್ನು ವಹಿಸಿದನು. ಚಾಲುಕ್ಯರು ಪಲ್ಲವರನ್ನು ಸೋಲಿಸಿ, ಅವರಿಂದ ಕಪ್ಪ ಕಾಣಿಕೆಗಳನ್ನು ಪಡೆದರು ಕ್ರಿ.ಶ.೭೫೩ರವರೆಗೂ ಆಳಿದರು.

ನಂತರ, ಆತನ ಮಗನಾದ ಇಮ್ಮಡಿ ವಿಕ್ರಮಾದಿತ್ಯನು ರಾಜ್ಯಭಾರ ವಹಿಸಿಕೊಂಡನು. ಅವನು ಕೇವಲ ೧೨ ವರ್ಷಗಳು ಮಾತ್ರ ರಾಜ್ಯವಾಳಿದರೂ, ತನ್ನೆಲ್ಲಾ ಸೇನಾ ಚಟುವಟಿಕೆಗಳಲ್ಲೂ ಯಶಸ್ವಿಯಾಗಿದ್ದನು. ಆತನು ಪಲ್ಲವ ದೇಶದ ಮೇಲೆ ದಾಳಿ ನಡೆಸಿ, ಇಮ್ಮಡಿ ನಂದಿವರ್ಮನನ್ನು

***ಒಂದನೆಯ ಗುಹಾಂತರ ಶಿವಾಲಯ, ಬಾದಾಮಿ, ಬಾಗಲಕೋಟೆ ಜಿಲ್ಲೆ***




ವಿರೂಪಾಕ್ಷ ದೇವಾಲಯದ ಪಾರ್ಶ್ವನೋಟ, ಪಟ್ಟದಕಲ್ಲು, ಬಾಗಲಕೋಟೆ ಜಿಲ್ಲೆ



*ಗೌಡರ ಗುಡಿ, ಐಹೊಳೆ ಬಾಗಲಕೋಟೆ ಜಿಲ್ಲೆ*

ವಾಡಖಾನ್ ದೇವಾಲಯ, ಐಹೊಳೆ, ಬಾಗಲಕೋಟೆ ಜಿಲ್ಲೆ



ಸೋಲಿಸಿ, ಕಟಾಮುಖ, ಸಮುದ್ರಘೋಷಗಳಂತಹ ಲಾಂಛನಗಳನ್ನು, ಅನೇಕ ಸಂಖ್ಯೆಯ ಆನೆಗಳು ಹಾಗೂ ಮಾಣಿಕ್ಯಗಳನ್ನು ವಶಕ್ಕೆ ತೆಗೆದುಕೊಂಡನು. ಆತನು ಕಂಚೀ ನಗರವನ್ನು ಪ್ರವೇಶಿದರೂ, ಅದನ್ನು ನಾಶ ಮಾಡಲಿಲ್ಲ.ಪಲ್ಲವರ ರಾಜಸಿಂಹೇಶ್ವರ ಹಾಗೂ ಇತರ ದೇವಾಲಯಗಳಿಗೆ ಭೇಟಿ ನೀಡಿ, ಈ ದೇವಾಲಯಗಳಿಗೆ ಧಾರಾಳವಾಗಿ ಚಿನ್ನದ ಆಭರಣಗಳ ದಾನ ನೀಡಿ, ರಾಜಸಿಂಹೇಶ್ವರದಲ್ಲಿ ಕನ್ನಡ ಶಾಸನವನ್ನು ಹಾಕಿಸಿದ್ದಾನೆ. ಆತನ ರಾಣಿಯರಾದ ಲೋಕಮಹಾದೇವಿ ಹಾಗೂ ತ್ರೈಲೋಕ್ಯಮಹಾದೇವಿಯರು, ಪಟ್ಟದಕಲ್ಲಿನಲ್ಲಿ ದೇವಾಲಯ ನಿರ್ಮಾಣ ಹಾಗೂ ದೇವಾಲಯಗಳ ನಿರ್ಮಾತೃವಾದ ಗುಂಡನನ್ನು ಗೌರವಿಸಿ ರಾಜಾಶ್ರಯಕ್ಕಾಗಿ ನೀಡಿದ್ದಕ್ಕಾಗಿ ಕಲಾ ಚರಿತ್ರೆಯಲ್ಲಿ ಸುಪ್ರಸಿದ್ಧರಾಗಿದ್ದಾರೆ.

ರಾಷ್ಟ್ರಕೂಟ ಚಕ್ರವರ್ತಿ ಮೊದಲನೆಯ ಕೃಷ್ಣನು ಆತನನ್ನು ಸೋಲಿಸುವವರೆಗೂ, ಇಮ್ಮಡಿ ಕೀರ್ತಿವರ್ಮನು (ಕ್ರಿ.ಶ.೭೪೫–೭೫೭) ರಾಜ್ಯವಾಳಿದನು. ಇಮ್ಮಡಿ ಕೀರ್ತಿವರ್ಮನ ಸಿಂತನ ಕುರಿತಾಗಿ ಯಾವುದೇ ಮಾಹಿತಿ ಲಭ್ಯವಿಲ್ಲ. ಇದರೊಂದಿಗೆ ಬಾದಾಮಿ ಚಾಲುಕ್ಯರ ಎರಡೂವರೆ ಶತಮಾನಗಳ ಆಳ್ವಿಕೆಯು ಅಂತ್ಯಗೊಂಡಿತು.

ಡೆಕ್ಕನ್ ಹಾಗೂ ಕರ್ನಾಟಕದ ಚರಿತ್ರೆಯಲ್ಲಿ ಬಾದಾಮಿ ಚಾಲುಕ್ಯರ ಆಳ್ವಿಕೆಯು ವೈಭವೋಪೇತ ಯುಗವಾಗಿದೆ. ಪ್ರಪ್ರಥಮ ಬಾರಿಗೆ, ಕರ್ನಾಟಕದ ರಾಜಕೀಯ ಐಕ್ಯತೆಯು ಏರ್ಪಡುವ ಮೂಲಕ ಕರ್ನಾಟಕವು ಇಡೀ ದೇಶದಲ್ಲಿ ಮನೆಮಾತಾಯಿತು. ದೂರದ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಮೂಲಕ ಕರ್ನಾಟಕದ ಗಡಿಗಳನ್ನು ವಿಸ್ತರಿಸಲಾಯಿತು. ಚಾಲುಕ್ಯ ರಾಜ್ಯವು ವಿಸ್ತಾರವಾಗಿದ್ದರೂ, ಅದರ ಸುವ್ಯವಸ್ಥಿತ ಆಡಳಿತಕ್ಕಾಗಿ ಈ ರಾಜವಂಶದ ರಾಜರು ವ್ಯವಸ್ಥೆಯನ್ನು ಮಾಡಿದ್ದನ್ನು ಯಾತ್ರಿಕನಾದ ಹುಯೆನ್ ತ್ಸಾಂಗ್‌ನು ಮೆಚ್ಚುಗೆ ವ್ಯಕ್ತಪಡಿಸಿದ್ದಾನೆ. ಸಂಸ್ಕೃತ ಹಾಗೂ ಕನ್ನಡದ ಅಭಿವೃದ್ಧಿ, ಅಗ್ರಹಾರ, ಬ್ರಹ್ಮಪುರಿ ಹಾಗೂ ಘಟಿಕಗಳಂತಹ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಗಳು, ಈ ರಾಜವಂಶದ ಅರಿವಿನಿಂದ ಕೂಡಿದ ಆಳ್ವಿಕೆಯ ಕಾರಣದಿಂದ ಉಂಟಾದವು. ಕಲಾ ಕ್ಷೇತ್ರಕ್ಕೆ ಚಾಲುಕ್ಯರು ನೀಡಿದ ಕೊಡುಗೆಯನ್ನು ಕುರಿತಾಗಿ ವಿಶೇಷವಾಗಿ ಹೇಳಬೇಕಾಗಿದೆ. ಚಾಲುಕ್ಯರ ಆಶ್ರಯದಡಿಯಲ್ಲಿ, ವಾಸ್ತು ರಚನೆಕಾರರು ವೇಸರ ಕಲಾಶೈಲಿಯನ್ನು ರೂಪಿಸಿದರು; ಅಂದು ಚಾಲ್ತಿಯಲ್ಲಿದ್ದ ನಾಗರ (ಉತ್ತರೀಯ) ಹಾಗೂ ದ್ರಾವಿಡ (ದಾಕ್ಷಿಣಾತ್ಯ) ಶೈಲಿಗಳಿಗಿಂತ ಇದು ಭಿನ್ನವಾಗಿತ್ತು. ವಿವಿಧ ಶೈಲಿಯ ಕಲೆಗಳೊಂದಿಗೆ ಪ್ರಯೋಗಗಳನ್ನು ನಡೆಸಿ, ದೇವಾಲಯ ನಿರ್ಮಾಣ ವ್ಯವಸ್ಥೆಯನ್ನು ಪರಿಪೂರ್ಣಗೊಳಿಸಿದರು. ಇವರ ಕಾಲದ ಕಲಾ ಕೇಂದ್ರಗಳಾದ ಐಹೊಳೆ, ಪಟ್ಟದಕಲ್ ಹಾಗೂ ಬಾದಾಮಿಗಳು ಅಖಿಲ–ಭಾರತೀಯ ಲಕ್ಷಣವುಳ್ಳ ಕಲಾ ಕಾರ್ಯಾಗಾರಗಳಾಗಿದ್ದು, ದೇಶದೆಲ್ಲೆಡೆಯ ಕಲಾವಿದರು ಅಲ್ಲಿಗೆ ಭೇಟಿ ನೀಡುತ್ತಿದ್ದರು. ಐಹೊಳೆ, ಪಟ್ಟದಕಲ್ ಹಾಗೂ ಬಾದಾಮಿಗಳಲ್ಲಿ ನಾಗರ, ದ್ರಾವಿಡ ಹಾಗೂ ವೇಸರ ಶೈಲಿಯ ಸ್ಮಾರಕಗಳು ನಿರ್ಮಾಣಗೊಂಡಿದ್ದು, ಭಾರತೀಯ ಕಲಾ ಇತಿಹಾಸದಲ್ಲಿಯೇ ಅಪರೂಪದ ವಿದ್ಯಮಾನ ವಾಯಿತು. ಕರ್ನಾಟಕದ ವರ್ಚಸ್ಸು ಹಾಗೂ ಸ್ಥಾನಮಾನಗಳಿಗೆ ಚಾಲುಕ್ಯರು ಗಣನೀಯ ಕೊಡುಗೆ ನೀಡಿದರು.



*ಮಹಾಕೂಟೇಶ್ವರ ದೇವಾಲಯ ಸಂಕೀರ್ಣ, ಬಾಗಲಕೋಟೆ ಜಿಲ್ಲೆ*

## ಮಳಖೇಡದ ರಾಷ್ಟ್ರಕೂಟರು

ಡೆಕ್ಕನ್ ಹಾಗೂ ಕರ್ನಾಟಕದ ಅತ್ಯಂತ ಶ್ರೇಷ್ಠ ರಾಜವಂಶಗಳ ಪೈಕಿ ರಾಷ್ಟ್ರಕೂಟರದೂ ಒಂದು. ಅವರ ಆಳ್ವಿಕೆಯು ಡೆಕ್ಕನ್‌ನ ಬಹುತೇಕ ಭಾಗಗಳಿಗೆ ವಿಸ್ತರಣೆಗೊಂಡಿತ್ತು. ವಿಸ್ತೃತ ಸಾಮ್ರಾಜ್ಯದ ಕಾರಣದಿಂದ, ಅವರ ಚರಿತ್ರೆಯು ಭಾರತದ ಚರಿತ್ರೆಯ ಶೋಭಾಯಮಾನ ಅಧ್ಯಾಯದ ಭಾಗವಾಗಿದೆ. ರಾಷ್ಟ್ರಕೂಟ ಎಂಬ ಪದವು ಅಧಿಕೃತ ಅಂಕಿತ ವಾಗಿ ಅಳವಡಿಸಿಕೊಳ್ಳಲಾಗಿದ್ದು, ಕಾಲಕ್ರಮೇಣ ಅದು ಕೌಟುಂಬಿಕ ಹೆಸರಾಗಿ ಮಾರ್ಪಾಡಾಯಿತು. ಇವರ ಶಾಸನಗಳಲ್ಲಿ, ಅವರನ್ನು ಲಟ್ಟಾಲೂರಪುರಾವರಧೀಶ್ವರರೆಂದು ಉಲ್ಲೇಖಿಸಲಾಗಿದೆ; ಇದರಿಂದ ಅವರ ಮೂಲ ಸ್ಥಳ ಲಟ್ಟಲೂರು ಎಂಬುದನ್ನು ಸೂಚಿಸುತ್ತದೆ. ಹಿಂದೆ ಕರ್ನಾಟಕದ ಭಾಗವಾಗಿದ್ದ ಲಟ್ಟಲೂರು, ಇಂದು ಉಸ್ಮಾನಾಬಾದ್ ಜಿಲ್ಲೆಯಲ್ಲಿರುವುದಾಗಿ ಗುರುತಿಸಲಾಗಿದೆ. ಅವರ ಹೆಸರುಗಳೆಲ್ಲವೂ ಕನ್ನಡ ಮೂಲವನ್ನು ಹೊಂದಿವೆ. ಅವರು ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಆಶ್ರಯದಾತರಾಗಿದ್ದರು. ಜಬಲ್‌ಪುರದಲ್ಲಿ ದೊರೆತ ಮೂರನೆಯ ಕೃಷ್ಣನ ಜೂರಾ ಪ್ರಶಸ್ತಿ ಶಾಸನವು ಕನ್ನಡ ಭಾಷೆ ಹಾಗೂ ಲಿಪಿಯಲ್ಲಿದೆ. ಗುಜರಾತ್ ರಾಷ್ಟ್ರಕೂಟರ ಇತರ ಶಾಖೆಗಳ ಹಾಗೂ ಸಂಸ್ಕೃತ ದಾಖಲೆಗಳಲ್ಲೂ ಕನ್ನಡವನ್ನೇ ರುಜುಮಾಡಲು ಬಳಸಲಾಗಿದೆ. ಇದರಿಂದ, ರಾಷ್ಟ್ರಕೂಟರು ಕರ್ನಾಟಕ ಮೂಲದ

ಬಂದ ಕನ್ನಡ ಮಾತನಾಡುವ ಜನರೆಂದು ಸ್ಪಷ್ಟವಾಗುತ್ತದೆ. ಗರುಡ ಹಾಗೂ ಪಾಲಿಧ್ವಜ ರಾಷ್ಟ್ರಕೂಟರ ರಾಜ ಲಾಂಛನಗಳಾಗಿವೆ.

ದಂತಿವರ್ಮನು ರಾಷ್ಟ್ರಕೂಟರ ಅತ್ಯಂತ ಮೊದಲಿಗ ಅರಸ ಒಬ್ಬನು; ಇವರ ನಂತರ, ಇಂದ್ರ, ಗೋವಿಂದರಾಜ, ಮೊದಲನೆಯ ಕರ್ಕ, ಇಮ್ಮಡಿ ಇಂದ್ರ ಹಾಗೂ ದಂತಿದುರ್ಗರು ಬಂದರು. ಇಮ್ಮಡಿ ಇಂದ್ರನು ಗುಜರಾತಿನ ಚಾಲುಕ್ಯ ಕುಟುಂಬದ ರಾಜಕುಮಾರಿಯನ್ನು ವಿವಾಹವಾಗಿ ದಂತಿದುರ್ಗನೆಂಬ ಮಗನನ್ನು ಪಡೆದನು. ಎಲ್ಲಾ ದೃಷ್ಟಿಯಿಂದಲೂ, ಆತನನ್ನು ರಾಷ್ಟ್ರಕೂಟ ರಾಜವಂಶದ ಸಂಸ್ಥಾಪಕ ಹಾಗೂ ಪ್ರಥಮ ದೊರೆಯೆಂದು ಪರಿಗಣಿಸಲಾಗಿದ್ದು, ಈತನು ಕ್ರಿ.ಶ.೭೩೫–೭೫೬ರವರೆಗೆ ಆಳಿದನು. ಪ್ರಾರಂಭದಲ್ಲಿ, ಬಾದಾಮಿ ಚಾಲುಕ್ಯರ ಸಾಮಂತನಾಗಿದ್ದು, ಬಹುಶಃ ಔರಂಗಾಬಾದ್ ಪ್ರದೇಶದಲ್ಲಿ ಸ್ಥಾಪಿತವಾಗಿದ್ದನು. ಅರಬ್ಬರನ್ನು ಸೋಲಿಸಲು ಗುಜರಾತ್ ದೊರೆ ಚಾಲುಕ್ಯ ಅವನಿಜನಾಶ್ರಯ ಪುಲಿಕೇಶಿಯೊಂದಿಗೆ ಕೈಜೋಡಿಸಿದ್ದು, ಇಮ್ಮಡಿ ವಿಕ್ರಮಾದಿತ್ಯನಿಗೆ ಕಂಚಿಯ ದಂಡಯಾತ್ರೆಗಳಲ್ಲಿ ನೆರವು ನೀಡಿದ್ದನು. ಮುಂದೆ ಇಮ್ಮಡಿ ಕೀರ್ತಿವರ್ಮನು ಸಿಂಹಾಸನವೇರಿದಾಗ ಚಾಲುಕ್ಯ ಸಾಮ್ರಾಜ್ಯದ ಉತ್ತರದ ಭಾಗಗಳಲ್ಲಿ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಲು ದಂತಿದುರ್ಗನಿಗೆ ಸಾಧ್ಯವಾಯಿತು. ಪೃಥ್ವೀವಲ್ಲಭ ಹಾಗೂ ಖಡ್ಗಾವಲೋಕ ಎಂಬ ಬಿರುದನ್ನು ಧರಿಸಿದ್ದ ಇವನು ಹಿರಣ್ಯಗರ್ಭ ಮಹಾದಾನವನ್ನೂ ನೆರವೇರಿಸಿದ್ದನು. ಸ್ವತಂತ್ರನಾದ ಮೇಲೆ, ಮಹಾರಾಜಾಧಿರಾಜ, ಪರಮೇಶ್ವರ ಹಾಗೂ ಪರಮಭಟ್ಟಾರಕ ಎಂಬ ಬಿರುದುಗಳನ್ನು ಧರಿಸಿದರೂ ಕ್ರಿ.ಶ.೭೫೬ರಲ್ಲಿ ಮಕ್ಕಳಿಲ್ಲದವನಾಗಿ ಮರಣ ಹೊಂದಿದನು. ಇವನ ನಂತರ, ಅವನ ಚಿಕ್ಕಪ್ಪನಾದ ಮೊದಲನೆಯ ಕೃಷ್ಣನು ಪಟ್ಟವೇರಿದನು.

ಮೊದಲನೆಯ ಕೃಷ್ಣನು ಚಾಲುಕ್ಯರ ವಿರುದ್ಧ ಹೋರಾಡಿ, ಅವರಿಗೆ ಮರಣದೇಟನ್ನು ನೀಡಿದನು. ನಂತರ, ಕೊಂಕಣದ ಮೌರ್ಯರ ವಿರುದ್ಧ ಸೈನ್ಯ ಕಟ್ಟಿ, ಅವರ ಅರಸನನ್ನು ಸೋಲಿಸಿ, ಶಿಲಹಾರ ಕುಟುಂಬದ ಸನಪುಲ್ಲನನ್ನು ರಾಜನನ್ನಾಗಿ ಮರುಸ್ಥಾಪಿಸಿದನು. ರಾಷ್ಟ್ರಕೂಟರನ್ನು ಬಲವಾಗಿ ವಿರೋಧಿಸಿದ ಗಂಗ ಶ್ರೀಪುರುಷನನ್ನು ಎದುರಿಸಿದನು. ಆದರೆ ಅಂತಿಮವಾಗಿ, ಮೊದನೆಯ ಕೃಷ್ಣನು ಮೇಲುಗೈ ಸಾಧಿಸಿ, ಮುಂದುವರೆದು ಮಣ್ಣೆಯವರೆಗೆ ಬಂದನು.ಗಂಗರ ವಿರುದ್ಧದ ಈ ಯುದ್ಧದಲ್ಲಿ, ಅವನ ಮಗನಾದ ಇಮ್ಮಡಿ ಗೋವಿಂದನು ಪ್ರಮುಖ ಪಾತ್ರವಹಿಸಿದನು. ಆತನ ಕರ್ತವ್ಯಪಾಲನೆಯಿಂದ ಉತ್ತೇಜಿತನಾದ ಕೃಷ್ಣನು ಕ್ರಿ.ಶ.೭೬೯ರಲ್ಲಿ ವೆಂಗಿ ರಾಜ್ಯದ ವಿರುದ್ಧ ಅವನನ್ನು ಕಳುಹಿಸಿದನು.ವೆಂಗಿ ರಾಜ ವಿಷ್ಣುವರ್ಧನನನ್ನು ಇಮ್ಮಡಿ ಗೋವಿಂದನು ಸೋಲಿಸಿದನು. ಹಾಗಾಗಿ, ರಾಷ್ಟ್ರಕೂಟರ ಮೊದಲನೆಯ ಕೃಷ್ಣನು ಕ್ರಿ.ಶ.೭೭೩ರಲ್ಲಿ ಮರಣ ಹೊಂದಿದಾಗ, ಆತನ ಮಗನಾದ ಇಮ್ಮಡಿ ಗೋವಿಂದನು ರಾಷ್ಟ್ರಕೂಟ ರಾಜನಾದನು. ಮೊದಲನೆಯ ಕೃಷ್ಣನ ಗಮನಾರ್ಹ ಸಾಧನೆಯೆಂದರೆ, ಭಾರತೀಯ ವಾಸ್ತು ನಿರ್ಮಾಣದಲ್ಲಿ ಅಭೂತಪೂರ್ವ ಪ್ರಯೋಗವೆಂದು ಪರಿಗಣಿಸಲಾದ ಎಲ್ಲೋರದ ಕೈಲಾಸ ದೇವಾಲಯದ ನಿರ್ಮಾಣ. ಈ ಗುಹಾ ದೇವಾಲಯವು ಮಾನವರ


***ಜೈನ ನಾರಾಯಣ ದೇವಾಲಯ, ಪಟ್ಟದಕಲ್ಲು, ಬಾಗಲಕೋಟೆ ಜಿಲ್ಲೆ***

ಕೃತಿಯಲ್ಲವೆಂದೂ, ಅದು ದೈವಿಕ ವಾಸ್ತು ನಿರ್ಮಾತೃಗಳ ಕಾರ್ಯವೆಂದು ಶಾಸನವೊಂದು ವಿವರಿಸಿದ್ದು ಈ ಹೇಳಿಕೆಯಲ್ಲಿ ಯಾವುದೇ ರೀತಿಯ ಅತಿರೇಕವಿಲ್ಲ!

ಸ್ವೇಚ್ಛಾಚಾರದ ಅಭ್ಯಾಸ ಹಾಗೂ ಭೋಗಾಸಕ್ತಿಯಿಂದಾಗಿ, ಅಲ್ಪಾವಧಿ ಆಳಿದ ಇಮ್ಮಡಿ ಗೋವಿಂದನು, ರಾಜನಾಗಿ ವಿಫಲನಾದನು. ತನ್ನ ತಮ್ಮನಾದ ಧ್ರುವನಿಗೆ ಸ್ವತಃ ತಾನೇ ಪಟ್ಟವನ್ನು ಬಿಟ್ಟುಕೊಟ್ಟನೋ ಅಥವಾ ಕಾಳಗದಲ್ಲಿ ಅದನ್ನು ಗೋವಿಂದನಿಂದ ಕಸಿದುಕೊಂಡು, ಧ್ರುವ ರಾಜನಾದನೋ, ತಿಳಿಯದು.

ಕ್ರಿ.ಶ.೭೮೦ರಿಂದ ಧ್ರುವನು ಆಳಲು ಪ್ರಾರಂಭಿಸಿದನು.ಗೂರ್ಜರ ಪ್ರತೀಹಾರ ವತ್ಸರಾಜ ಹಾಗೂ ಬಂಗಾಳದ ಪಾಳರಾಜ, ಧರ್ಮಪಾಲರು ಪರಸ್ಪರ ಸೆಣಸಾಡುತ್ತಿದ್ದರಿಂದ, ಆ ಪರಿಸ್ಥಿತಿಯ ಪ್ರಯೋಜನ ಪಡೆಯಲು, ಉತ್ತರದತ್ತ ದಂಡಯಾತ್ರೆಯನ್ನು ವ್ಯವಸ್ಥೆ ಮಾಡುವುದು ಧ್ರುವನ ಮೊದಲ ರಾಜಕೀಯ ಚಟುವಟಿಕೆ ಆಗಿದ್ದಿತು. ಆತನ ಇಬ್ಬರು ಮಕ್ಕಳಾದ ಗೋವಿಂದ ಹಾಗೂ ಇಂದ್ರರೊಂದಿಗೆ, ಧ್ರುವನು ನರ್ಮದಾ ನದಿಯನ್ನು ದಾಟಿ, ಕನೌಜದತ್ತ ನಡೆದನು. ಮೊದಲಿಗೆ ವತ್ಸರಾಜನು ಸೈನ್ಯವನ್ನು ವಿರೋಧಿಸಿ ಸೋಲನ್ನಪ್ಪಿದನು. ಸೋಲಿನ ಮುಂದಿನ ಸರದಿಯು ಧರ್ಮಪಾಲನದಾಗಿತ್ತು, ಹಾಗೂ ಅವನು ತನ್ನ ರಾಜ ಲಾಂಛನವನ್ನೂ ಕಳೆದುಕೊಂಡನು. ಹಾಗಾಗಿ, ಧ್ರುವನು ಉತ್ತರ ಭಾರತದಲ್ಲೂ, ನಿರ್ವಿವಾದಿತ ದೊರೆಯಾದನು. ಗಂಗ ಹಾಗೂ ಯಮುನಾ ನದಿಗಳ ಪ್ರದೇಶದಲ್ಲಿ ಕೆಲವು ಕಾಲ ತಂಗಿದ ನಂತರ, ನದಿಗಳ ಚಿಹ್ನೆಗಳೂ ಸೇರಿದಂತೆ, ಅನೇಕ ಯುದ್ಧದ ವಿಜಯ ಸ್ಮಾರಕಗಳೊಂದಿಗೆ ಹಿಂತಿರುಗಿದನು. ಆತನು ರಾಜಧಾನಿಗೆ ಹಿಂತಿರುಗುವಾಗ, ವೆಂಗಿ ರಾಜ್ಯಕ್ಕೆ ಭೇಟಿ ಇತ್ತಾಗ, ಅಲ್ಲಿನ ರಾಜನಾದ ನಾಲ್ಕನೆಯ ವಿಷ್ಣುವರ್ಧನನು, ಯುದ್ಧದ ಗೋಜಿಗೇ ಹೋಗದೆ, ಧ್ರುವನಿಗೆ ತನ್ನ ಮಗಳಾದ ಶಿಲಭಟ್ಟಾರಕಿಯನ್ನು ಮದುವೆ ಮಾಡುವ ಪ್ರಸ್ತಾಪವನ್ನು ಮುಂದಿಟ್ಟು, ತನ್ನ ಸ್ನೇಹವನ್ನು ಭದ್ರಪಡಿಸಿಕೊಂಡನು.ಮೊದಲನೆಯ ಕೃಷ್ಣನು ಗಂಗ ಶ್ರೀಪುರುಷನನ್ನು ಈ ಮೊದಲು ಸೋಲಿಸಿದ್ದರೂ, ಅವನ ಮಗನಾದ ಶಿವಮಾರನು ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲಿಲ್ಲ.ಅವರಿಬ್ಬರ ನಡುವೆ ನಡೆದ ಯುದ್ಧದಲ್ಲಿ, ಶಿವಮಾರನನ್ನು ಸೆರೆಮನೆಗೆ ಹಾಕಿ, ಧ್ರುವನ ಮಗನಾದ ಸ್ಥಂಭನನ್ನು ಗಂಗ ಪ್ರದೇಶಕ್ಕೆ ರಾಜ್ಯಪಾಲನನ್ನಾಗಿ ನೇಮಕ ಮಾಡಲಾಯಿತು.ನಂತರ ಧ್ರುವನು ಪಲ್ಲವ ರಾಜ್ಯಕ್ಕೆ ಮುನ್ನುಗ್ಗಿ, ಒಂದನೆಯ ನಂದಿವರ್ಮನನ್ನು ಸೋಲಿಸಿ, ವಿಜಯದೊಂದಿಗೆ ರಾಜಧಾನಿಗೆ ಹಿಂತಿರುಗಿದನು.ಈ ವಿಜಯಗಳಿಂದ, ಧ್ರುವನು ವಿಶಾಲವಾದ ಸಾಮ್ರಾಜ್ಯಕ್ಕೆ ಒಡೆಯನಾಗಿ, ಭಾರತದಲ್ಲಿ ಅತ್ಯಂತ ಪ್ರಖ್ಯಾತ ಅರಸನಾದನು.

ಆತನ ವೈಯಕ್ತಿಕ ಧೈರ್ಯ ಹಾಗೂ ರಾಜತಾಂತ್ರಿಕತೆಯಿಂದ, ರಾಷ್ಟ್ರಕೂಟರ ಪ್ರಭಾವವು ದಶ ದಿಕ್ಕುಗಳಲ್ಲೂ ಹರಡಿತು. ಧ್ರುವನಿಗೆ ನಾಲ್ಕು ಗಂಡು ಮಕ್ಕಳಿದ್ದರು: ಕರ್ಕ, ಸ್ಥಂಭ, ಮುಮ್ಮಡಿ ಗೋವಿಂದ ಹಾಗೂ ಇಂದ್ರ. ಮುಮ್ಮಡಿ ಗೋವಿಂದನು ತನ್ನ ತಂದೆಯ ಉತ್ತರದ ದಂಡಯಾತ್ರೆಗಳಲ್ಲಿ, ಅವನಿಗೆ ನೆರವು ನೀಡಿದ್ದು, ಗಂಗವಾಡಿ ದೇಶದ ರಾಜ್ಯಪಾಲನಾಗಿ ಸ್ಥಂಭನು ನೇಮಕಗೊಂಡನು.ತನ್ನ ಮಗ ಮುಮ್ಮಡಿ ಗೋವಿಂದನನ್ನು ಧ್ರುವನು ತನ್ನ ಉತ್ತರಾಧಿಕಾರಿಯಾಗಿ ನೇಮಕ ಮಾಡಿದ್ದನು.ಕ್ರಿ.ಶ.೭೯೩ರಲ್ಲಿ ಆತನು ಮಡಿದಾಗ, ಮುಮ್ಮಡಿ ಗೋವಿಂದ ರಾಜನಾದನು.

ತನ್ನ ಮಕ್ಕಳ ನಡುವೆ ಸಿಂಹಾಸನಕ್ಕಾಗಿ ಪೈಪೋಟಿಯನ್ನು ತಪ್ಪಿಸಲು ಧ್ರುವನು ಪ್ರಯತ್ನಿಸಿದನಾದರೂ, ಮುಮ್ಮಡಿ ಗೋವಿಂದನ ಅಣ್ಣನಾದ ಸ್ಥಂಭನು, ಅವನ ವಿರುದ್ಧ ದಂಗೆ ಎದ್ದನು. ೧೩ ಅರಸರನ್ನು ಒಳಗೊಂಡ ಸ್ಥಂಭನ ಒಕ್ಕೂಟವು, ಮುಮ್ಮಡಿ ಗೋವಿಂದನಿಂದ ಸುಲಭವಾಗಿ ಸೋಲನ್ನಪ್ಪಿದ್ದಾಗ ಮುಮ್ಮಡಿ ಗೋವಿಂದನು ಸ್ಥಂಭನನ್ನು ಸೆರೆಯಾಳಾಗಿ ಹಿಡಿದನು, ಆದರೆ ಗೋವಿಂದನು ಅವನ ಮೇಲೆ ಕನಿಕರ ಪಟ್ಟು, ಸೆರೆಮನೆಯಿಂದ ಬಿಡಿಸಿ, ಗಂಗವಾಡಿಯ ರಾಜ್ಯಪಾಲನನ್ನಾಗಿ ಮರು ಸ್ಥಾಪಿಸಿದನು. ತನ್ನನ್ನು ರಾಜ್ಯದಲ್ಲಿ ನಿರ್ವಿವಾದಿತ ದೊರೆಯಾಗಿ ಗುರುತಿಸಿ ಕೊಂಡನಂತರ, ಗೋವಿಂದನ ಗಮನವು ಉತ್ತರದತ್ತ ತಿರುಗಿತು. ದಕ್ಷಿಣ ಗುಜರಾತಿನ ರಾಜ್ಯಪಾಲನನ್ನಾಗಿ ತನ್ನ ನಿಷ್ಠಾವಂತ ಸಹೋದರನಾದ ಇಂದ್ರನನ್ನು ನೇಮಿಸಿ ರಾಜ್ಯದ ರಕ್ಷಣೆಯನ್ನು ಅವನಿಗೆ ಒಪ್ಪಿಸಿದನು. ವತ್ಸರಾಜನ ಉತ್ತರಾಧಿಕಾರಿಯಾದ ನಾಗಭಟನು ರಾಷ್ಟ್ರಕೂಟರನ್ನು ಬಹಳ ಕಾಲದವರೆಗೂ ಎದುರಿಸಲಾಗದೆ ಯುದ್ಧಭೂಮಿಯಿಂದ ಪಲಾಯನ ಮಾಡಿದನು. ಮುಮ್ಮಡಿ ಗೋವಿಂದನಿಗೆ ಕನೌಜ್‌ನ ಚಕ್ರಾಯುಧನು ಶರಣಾಗತನಾದನು. ಬಂಗಾಳದ ಧರ್ಮಪಾಲನೂ ಸಹ ವಿಜಯಶಾಲಿ ರಾಷ್ಟ್ರಕೂಟ ರಾಜನಿಗೆ ಶರಣಾದನು. ಈ ಗೆಲುವುಗಳಿಂದಾಗಿ ಬಹಳಷ್ಟು ಉತ್ಸಾಹದೊಂದಿಗೆ ಹಿಮಾಲಯದ ತಪ್ಪಲಿನವರೆಗೂ ಕ್ರಿ.ಶ.೮೦೦ರಲ್ಲಿ ಮುಮ್ಮಡಿ ಗೋವಿಂದನು ಮುನ್ನಡೆದನು; ಆತನ ಪೂರ್ವಾಧಿಕಾರಿಗಳು ಯಾರೂ ಈ ರೀತಿಯ ಸಾಧನೆಯನ್ನು ಮಾಡಿರಲಿಲ್ಲ. ನಂತರ, ವೆಂಗಿ ಚಾಲುಕ್ಯ ಅರಸನಾದ ಇಮ್ಮಡಿ ವಿಜಯಾದಿತ್ಯನನ್ನು ಸೋಲಿಸಿದನು. ಈ ವಿಜಯಗಳ ನಂತರ, ಪುನಃ ತನ್ನ ದಕ್ಷಿಣದ ದಂಡಯಾತ್ರೆಯನ್ನು ಪ್ರಾರಂಭಿಸಿ, ತುಂಗಭದ್ರೆಯ ದಡದಲ್ಲಿರುವ ಆಲಂಪೂರವನ್ನು ತನ್ನ ಕಾರ್ಯಾಚರಣೆಗಳಿಗೆ ಮೂಲಸ್ಥಾನವನ್ನಾಗಿಸಿಕೊಂಡನು. ಕ್ರಿ.ಶ.೮೦೩ರಲ್ಲಿ ಪಲ್ಲವ ದಂತಿವರ್ಮನು ಸೋತುಹೋದನು. ಅಲ್ಲದೆ ಇತರ ರಾಜವಂಶಗಳಾದ ಪಾಂಡ್ಯರು, ಚೋಳರು ಹಾಗೂ ಶ್ರೀಲಂಕಾದ ಅರಸರು ಇವನಿಗೆ ಶರಣಾಗತರಾದರು. ಈ ರೀತಿಯಲ್ಲಿ, ಆತನ ದಾಕ್ಷಿಣಾತ್ಯ ದಂಡಯಾತ್ರೆಗಳೂ ಯಶಸ್ವಿಯಾದವು.



***ಕೈಲಾಸನಾಥ ದೇವಾಲಯ, ಎಲ್ಲೋರಾ, ಮಹಾರಾಷ್ಟ್ರ***

ತನ್ನ ಪೌರುಷ, ಸೇನಾ ಕೌಶಲ್ಯ ಹಾಗೂ ರಾಯಭಾರತ್ವದ ಮೂಲಕ, ಮುಮ್ಮಡಿ ಗೋವಿಂದನು ಸಂಪೂರ್ಣ ರಾಜ್ಯದ ನಿರ್ವಿವಾದಿತ ಮುಖಂಡನಾಗಿ, ಜಗದ್ರುದ್ರ, ಜಗತ್ತುಂಗ, ಪ್ರಭೂತವರ್ಷ, ಶ್ರೀವಲ್ಲಭ, ಮುಂತಾದ ದೊಡ್ಡ ದೊಡ್ಡ ಬಿರುದುಗಳನ್ನು ಧರಿಸಿದನು. ತನ್ನ ವಿಶಾಲವಾದ ಸಾಮ್ರಾಜ್ಯವನ್ನು ವ್ಯವಸ್ಥಿತವಾದ ಆಡಳಿತಕ್ಕಾಗಿ ಒಪ್ಪಗೊಳಿಸಿದನು. ಗೋವಿಂದನ ರಾಣಿಯಾದ ಗಾಮುಂಡಬ್ಬೆಯು, ಅರಸನು ಉತ್ತರದ ದಂಡಯಾತ್ರೆಯಿಂದ ಹಿಂತಿರುಗುತ್ತಿದ್ದಾಗ, ಮಗನೊಬ್ಬನಿಗೆ ಜನ್ಮವಿತ್ತಳು. ಅವನಿಗೆ ಅಮೋಘವರ್ಷ ನೃಪತುಂಗನೆಂದು ನಾಮಕರಣ ಮಾಡಿದರು. ತನ್ನ ಸೋದರಳಿಯ, ಗುಜರಾತಿನ ಕರ್ಕ ಸುವರ್ಣವರ್ಷನನ್ನು ರಾಜಕುಮಾರನ ಪಾಲನೆಗಾಗಿ ನೇಮಕ ಮಾಡಿದ್ದ. ಗೋವಿಂದನು ಕ್ರಿ.ಶ.೮೧೪ರಲ್ಲಿ ಮಡಿದನು. ಅವನು ಮರಣ ಹೊಂದಿದಾಗ, ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತುಂಗಕ್ಕೇರಿತು. ಹಾಗಾಗಿ, ಮುಮ್ಮಡಿ ಗೋವಿಂದನನ್ನು ರಾಷ್ಟ್ರಕೂಟರ ಅತ್ಯಂತ ಪ್ರಮುಖ ಚಕ್ರವರ್ತಿಯೆಂದು ಕರೆಯುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

ಅಮೋಘವರ್ಷನು ಸಾಮ್ರಾಜ್ಯದ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವಂತಾದಾಗ, ಗುಜರಾತಿನ ಕರ್ಕನು ಸಂಸ್ಥಾನಕ್ಕೆ ತೆರಳಿದನು. ಅಮೋಘವರ್ಷನು ಧರ್ಮ ಹಾಗೂ ಸಾಹಿತ್ಯದಲ್ಲಿ ಅಭಿರುಚಿ ಇರುವ ಶಾಂತಿಪ್ರಿಯ ವ್ಯಕ್ತಿತ್ವದವನಾಗಿದ್ದನು. ಆತನ ಸಂಜಾಂ ತಾಮ್ರ ಫಲಕಗಳು, ಜನರ ಕಲ್ಯಾಣಕ್ಕಾಗಿ ಆತನು ಕೈಗೊಂಡ ಅತ್ಯುನ್ನತ ತ್ಯಾಗವನ್ನು ನಮಗೆ ತಿಳಿಸುತ್ತ ತನ್ನ ಪ್ರಜೆಗಳನ್ನು ಭೀಕರ ಕ್ಷಾಮದಿಂದ ರಕ್ಷಿಸಲು ಕೊಲ್ಹಾಪುರದ ದೇವಿ ಮಹಾಲಕ್ಷ್ಮಿಗೆ ತನ್ನ ಬೆರಳನ್ನೇ ಅರ್ಪಿಸಿದ ಅಂಶವನ್ನು ದಾಖಲಿಸಿದೆ, ಆತನು ವಿದ್ವಾಂಸನಾಗಿದ್ದು ಕನ್ನಡದ ಮೊಟ್ಟಮೊದಲ ಕೃತಿಯಾದ ಕವಿರಾಜಮಾರ್ಗದ ಕರ್ತೃವು, ಆತನ ಆಸ್ಥಾನ ಕವಿಯಾದ ಶ್ರೀವಿಜಯನೆಂದು ಖಚಿತವಾಗಿದೆ. ಮಹಾನ್ ಜೈನ ಗುರು ಹಾಗೂ ಲೇಖಕನಾದ ಜಿನಸೇನನು ಆತನ ಗುರುವಾಗಿದ್ದನು. ಅಮೋಘವರ್ಷನ ಆಶ್ರಯದಲ್ಲಿ, ಶಕಟಾಯನನು ವ್ಯಾಕರಣ ಕೃತಿಯಾದ 'ಅಮೋಘವೃತ್ತಿ'ಯನ್ನು ಬರೆದನು. ಆತನ ಮತ್ತೊಂದು ಕೃತಿಯು 'ಶಬ್ದಾನುಶಾಸನ'. ಈ ರಾಜನ ಆಶ್ರಯದಲ್ಲಿ, 'ಗಣಿತಸಾರಸಂಗ್ರಹ'ದ ಕರ್ತೃವಾದ ಮಹಾ ವೀರಾಚಾರ್ಯನು ಏಳಿಗೆ ಹೊಂದಿದನು. ಬೌದ್ಧ ಧರ್ಮವೂ ಸೇರಿದಂತೆ, ಆತನು ವಿವಿಧ ಧರ್ಮಗಳ ಮಹಾನ್ ಆಶ್ರಯದಾತನಾಗಿದ್ದನು. ೬೪ ವರ್ಷಗಳ ಸುದೀರ್ಘ ಆಳ್ವಿಕೆಯ ನಂತರ, ಕ್ರಿ.ಶ.೮೭೮ರಲ್ಲಿ ಅಮೋಘವರ್ಷನು ಮರಣ ಹೊಂದಿದನು. ಅವನ ನಂತರ, ಅವನ ಮಗನಾದ ಇಮ್ಮಡಿ ಕೃಷ್ಣನು ಪಟ್ಟವೇರಿದನು. ಇಮ್ಮಡಿ ಕೃಷ್ಣನು ಅರಬರೊಂದಿಗೆ ಸ್ನೇಹಪರ ಸಂಬಂಧವನ್ನು ಹೊಂದಿದ್ದನು. ಕ್ರಿ.ಶ.೯೧೪ರಲ್ಲಿ ಕೃಷ್ಣನ ಮರಣದ ನಂತರ, ಆತನ ಮೊಮ್ಮಗನಾದ ಮೂರನೆಯ ಇಂದ್ರನು ಕ್ರಿ.ಶ.೯೨೯ರವರೆಗೂ ಆಳಿದನು.

ಕನೌಜದ ರಣರಂಗವನ್ನು ತೊರೆದು ಮಹಿಪಾಲನು ಪಲಾಯನ ಮಾಡಿದಾಗ, ರಾಷ್ಟ್ರಕೂಟ ಇಂದ್ರನ ಉತ್ತರದ ದಂಡಯಾತ್ರೆಗಳು ಅತ್ಯಂತ ಯಶಸ್ವಿಯಾದವು. ಇಂದ್ರನ ನಂತರ ಬಂದ ಅವನ ಮಗನಾದ ಇಮ್ಮಡಿ ಅಮೋಘವರ್ಷನು ಕೇವಲ ಒಂದು ವರ್ಷ ಆಳಿದನ್ನು. ನಂತರ ಆತನ ಸಹೋದರನಾದ ನಾಲ್ಕನೆಯ ಗೋವಿಂದನು, ಕ್ರಿ.ಶ.೯೩೦ರಲ್ಲಿ ಸಿಂಹಾಸನವನ್ನು ಏರಿದನು. ಮುಂದೆ ಕ್ರಿ.ಶ.೯೩೪ರಲ್ಲಿ ರಾಜನಾದ ಮುಮ್ಮಡಿ ಅಮೋಘವರ್ಷನು ವೃದ್ಧನಾಗಿದ್ದು ಆತನ ಮಗನಾದ ಮೂರನೆಯ ಕೃಷ್ಣನು ಧಾರ್ಮಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಒಲವಿದ್ದುದರಿಂದ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿದನು.

ಮೂರನೆಯ ಅಮೋಘವರ್ಷನ ಮರಣದ ನಂತರ, ಮೂರನೆಯ ಕೃಷ್ಣನು ಕ್ರಿ.ಶ.೯೩೯–೯೬೭ರ ಅವಧಿಯಲ್ಲಿ ರಾಜ್ಯವಾಳಿದನು. ಕ್ರಿ.ಶ.೯೪೯ರಲ್ಲಿ, ತಕ್ಕೋಲಂನ ಪ್ರಸಿದ್ಧ ಯುದ್ಧದಲ್ಲಿ, ಚೋಳ ಪರಾಂತಕನನ್ನು ಸೋಲಿಸಲಾಯಿತು. ಆ ಯುದ್ದದಲ್ಲಿ ರಾಜಕುಮಾರ ರಾಜಾದಿತ್ಯನು, ರಾಷ್ಟ್ರಕೂಟರ ಮಿತ್ರರಾಜನಾದ ಗಂಗ ಬೂತುಗನಿಂದ ಕೊಲ್ಲಲ್ಪಟ್ಟನು.ಚೋಳರಿಗೆ ಇದು ತಡೆಯಲಾರದ ಆಘಾತವಾಗಿ, ಅನೇಕ ದಶಕಗಳವರೆಗೂ ಅವರು ತಲೆಯೆತ್ತಲು ಸಾಧ್ಯವಾಗಲಿಲ್ಲ. ರಾಷ್ಟ್ರಕೂಟರ ಸೈನ್ಯವು ರಾಮೇಶ್ವರದವರೆಗೂ ಮುನ್ನುಗ್ಗಿ, ಅಲ್ಲಿ ವಿಜಯಸ್ಥಂಭವನ್ನು ನೆಟ್ಟು, ಆ ತಾಣದಲ್ಲಿ ಕೃಷ್ಣೇಶ್ವರ ದೇವಾಲಯವನ್ನು ನಿರ್ಮಾಣ ಮಾಡಿದರು.ಉತ್ತರ ಭಾರತ ಹಾಗೂ ವೆಂಗಿ ದೇಶದಲ್ಲೂ ಆತನು ಅಮೋಘ ಯಶಸ್ಸನ್ನು ಸಾಧಿಸಿದನು. ಹಾಗಾಗಿ, ಮುಮ್ಮಡಿ ಕೃಷ್ಣನು ತನ್ನೆಲ್ಲ ದಂಡಯಾತ್ರೆಗಳಲ್ಲೂ ಯಶಸ್ವಿಯಾಗಿ ರಾಷ್ಟ್ರಕೂಟ ವಂಶದ ಕೊನೆಯ ಮಹಾನ್ ಅರಸನೆನಿಸಿಕೊಂಡನು. ಜಬಲಪುರದ ಬಳಿಯಿರುವ ಜುರಾದಲ್ಲಿ ದೊರೆತಿರುವ ಕನ್ನಡ ಶಿಲಾಶಾಸನವು ಆತನ ಮಹೋನ್ನತಿಯ ವೈಭವೋಪೇತ ವೃತ್ತಾಂತವನ್ನು ನೀಡುತ್ತದೆ. ಆತನ ಮಗನ ಅಕಾಲಿಕ ಸಾವಿನಿಂದ, ಮುಮ್ಮಡಿ ಕೃಷ್ಣನ ನಂತರ ಆತನ ತಮ್ಮನಾದ ಖೊಟ್ಟಿಗನು ಕ್ರಿ.ಶ.೯೬೭ರಲ್ಲಿ ಸಿಂಹಾಸನವನ್ನು ಏರಿದನು.

ಖೊಟ್ಟಿಗನು ಬಲಶಾಲಿ ಅರಸನಾಗಿರಲಿಲ್ಲ. ಕ್ರಿ.ಶ.೯೭೨ರಲ್ಲಿ ಪರಮಾರ ಸಿಯಾಕ ಹರ್ಷನು ರಾಷ್ಟ್ರಕೂಟ ರಾಜ್ಯದ ಮೇಲೆ ಧಾಳಿ ನಡೆಸಿ, ಅವರ ರಾಜಧಾನಿಯನ್ನು ಲೂಟಿ ಮಾಡಿದನು.ಆದರೆ, ಗಂಗ ಮಾರಸಿಂಹನು ಮಧ್ಯ ಪ್ರವೇಶಿಸಿ ರಾಷ್ಟ್ರಕೂಟರ ಆಧಿಪತ್ಯದಿಂದ ಹರ್ಷನನ್ನು ಹೊರಕ್ಕೆ ದಬ್ಬಿದನು.ಈ ವೇಳೆಯಲ್ಲಿ, ಖೊಟ್ಟಿಗನು ಮರಣ ಹೊಂದಿ, ಆತನ ನಂತರ ಇಮ್ಮಡಿ ಕರ್ಕನು ಒಂದು ವರ್ಷದ ಕಾಲ ರಾಜ್ಯಭಾರವನ್ನು ನಡೆಸಿದನು.ಕ್ರಿ.ಶ.೯೭೩ರಲ್ಲಿ, ಚಾಲುಕ್ಯ ಸಾಮಂತನಾದ ತೈಲಪನು ರಾಷ್ಟ್ರಕೂಟರ ವಿರುದ್ಧ ದಂಗೆ ಎದ್ದು, ಕರ್ಕನನ್ನು ಸೋಲಿಸಿದನು. ಇದರೊಂದಿಗೆ ವೈಭವೋಪೇತವಾದ ರಾಷ್ಟ್ರಕೂಟರ ರಾಜವಂಶದ ಅವನತಿಯು ಪ್ರಾರಂಭವಾಗಿ, ಕಲ್ಯಾಣಿ ಚಾಲುಕ್ಯರು ಸಾರ್ವಭೌಮರಾಗಿ ಪ್ರವರ್ಧಮಾನಕ್ಕೆ ಬಂದರು.

ಬಹುಶಃ, ರಾಷ್ಟ್ರಕೂಟ ಸಾಮ್ರಾಜ್ಯವು ಬೇರೆಲ್ಲ ಹಿಂದೂ ಸಾಮ್ರಾಜ್ಯಗಳಿಗಿಂತಲೂ, ಡೆಕ್ಕನ್ ಪ್ರಾಂತ್ಯದ ಅತ್ಯಂತ ವಿಸ್ತಾರವಾದ ಸಾಮ್ರಾಜ್ಯವಾಗಿತ್ತು.ಪುರಾತನ ಭಾರತೀಯ ಇತಿಹಾಸದ ಯಾವ ಕಾಲದಲ್ಲಿಯೂ ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಅನುಭವಿಸಿದ ಉನ್ನತ ರಾಜಕೀಯ



ಸುಜ್ಞಾನೇಶ್ವರ ದೇವಾಲಯ, ಶಿರವಾಳ, ಗುಲಬರ್ಗಾ ಜಿಲ್ಲೆ

ಪ್ರತಿಷ್ಠೆಯನ್ನು ಡೆಕ್ಕನ್ ಪ್ರಾಂತ್ಯವು ಅನುಭವಿಸಲಿಲ್ಲ. ಭಾರತದಲ್ಲಿ ಅತ್ಯಂತ ಭಯಭೀತಿ ಹುಟ್ಟಿಸಿದ ಅರಸರೆನ್ನುವ ರಾಷ್ಟ್ರಕೂಟ ಸಾಮ್ರಾಜ್ಯವು ವಿಶ್ವದ ನಾಲ್ಕು ಮಹಾನ್ ಸಾಮ್ರಾಜ್ಯಗಳ ಪೈಕಿ ಒಂದೆಂದೂ, ಕ್ರಿ.ಶ.೮೫೧ರಲ್ಲಿ ಬಂದಿದ್ದ ಅರಬ್ಬಿ ಯಾತ್ರಿಕ ಸುಲೈಮಾನನ ಮಾತುಗಳು ಕೇವಲ ಮುಖಸ್ತುತಿಯಾಗಿರದೆ, ವಾಸ್ತವ ಸತ್ಯವಾಗಿತ್ತು. ತಮ್ಮ ರಾಜ್ಯದ ಆಡಳಿತವನ್ನು ಅವರು ದೃಢ ಬುನಾದಿಯ ಮೇಲೆ ವ್ಯವಸ್ಥಿತಗೊಳಿಸಿದ್ದು, ಶಿಕ್ಷಣ, ಸಾಹಿತ್ಯ ಹಾಗೂ ಧರ್ಮಕ್ಕೆ ಉತ್ತೇಜನ ದೊರೆಯಿತು. ವಾಸ್ತು ನಿರ್ಮಾಣದ ಕ್ಷೇತ್ರದಲ್ಲಿ, ಎಲ್ಲೋರದ ಕಡಿದಾದ ಶಿಲೆಯಲ್ಲಿ ಕೊರೆದ ಬೃಹತ್ ಗುಹಾಂತರ ದೇಗುಲ ಹಾಗೂ ಇತರ ಸ್ಥಳಗಳಲ್ಲಿ ಅನೇಕ ದೇವಾಲಯಗಳ ನಿರ್ಮಾಣವನ್ನೂ ಮಾಡಿದರು. ಆದರೆ ಎಲ್ಲೋರದ ಕೈಲಾಸ ದೇವಾಲಯವು ರಾಷ್ಟ್ರಕೂಟರಿಗೆ ಭಾರತೀಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ದೊರಕಿಸಿಕೊಟ್ಟಿದೆ.

## ಕಲ್ಯಾಣದ ಚಾಳುಕ್ಯರು

ತಮ್ಮ ರಾಜಧಾನಿಯಾದ ಬೀದರ್ ಜಿಲ್ಲೆಯ ಬಸವಕಲ್ಯಾಣದಿಂದ ಆಳುತ್ತಿದ್ದ ಕಾರಣ, ಇವರನ್ನು ಕಲ್ಯಾಣದ ಚಾಳುಕ್ಯರೆಂದು ಕರೆಯುತ್ತಿದ್ದು ಅವರನ್ನು ಬಾದಾಮಿ ಚಾಲುಕ್ಯರ ವಂಶಸ್ಥರೆಂದು ಪರಿಗಣಿಸಲಾಗುತ್ತದೆ. ಕಲ್ಯಾಣದ ಚಾಳುಕ್ಯರ ಬಹುತೇಕ ಶಾಸನಗಳು, ತಮ್ಮ ವಂಶಾವಳಿಯನ್ನು ಬಾದಾಮಿ ಚಾಲುಕ್ಯ ರಾಜರಿಂದ ಪ್ರಾರಂಭಿಸಿ ಕಲ್ಯಾಣದ ಚಾಳುಕ್ಯರ ಪ್ರಥಮ ಅರಸನಾದ ಇಮ್ಮಡಿ ತೈಲಪನನ್ನು ತಮ್ಮ ವಂಶಸ್ಥನೆಂದು ಹೆಸರಿಸಿವೆ. ಸುಪ್ರಸಿದ್ಧ ಕನ್ನಡ ಕವಿಯಾದ ರನ್ನನೂ, ತೈಲಪನು ಬಾದಾಮಿ ವಂಶಕ್ಕೆ ಸೇರಿದವನೆಂದೇ ಪರಿಗಣಿಸಿದ್ದಾನೆ.ಶಾಸನಗಳಲ್ಲಿ ನೀಡಿರುವಂತೆ ವಿಜಯಾದಿತ್ಯನ ಬೇರೊಬ್ಬ ಮಗನು ಒಂದನೆಯ ಭೀಮ, ಅವನ ನಂತರ ಬಂದ ಮುಮ್ಮಡಿ ಕೀರ್ತಿವರ್ಮ, ಇಮ್ಮಡಿ ಭೀಮ, ಮುಮ್ಮಡಿ ವಿಕ್ರಮಾದಿತ್ಯ, ಒಂದನೇ ಅಯ್ಯಣ್ಣ, ನಾಲ್ವಡಿ ವಿಕ್ರಮಾದಿತ್ಯ ಹಾಗೂ ಕೊನೆಯದಾಗಿ ಇಮ್ಮಡಿ ತೈಲಪನು ಬಂದನು. ಕೆಲವು ಅಲ್ಪ ವ್ಯತ್ಯಾಸಗಳೊಂದಿಗೆ ಇದೇ ವಂಶಾವಳಿಯನ್ನೂ ರನ್ನನೂ ನೀಡಿದ್ದಾನೆ ಇಮ್ಮಡಿ ತೈಲಪನ ಪೂರ್ವಿಕರನ್ನು ಕುರಿತು ಅಷ್ಟಾಗಿ ತಿಳಿಸಿಲ್ಲ. ಸಾರ್ವಭೌಮಾಧಿಕಾರವನ್ನು ಕಳೆದುಕೊಂಡ ನಂತರ ಬಾದಾಮಿ ಚಾಲುಕ್ಯರು ತಮ್ಮ ಸ್ವಾತಂತ್ರ್ಯವನ್ನು ಚಲಾಯಿಸುವ ಅವಕಾಶಕ್ಕಾಗಿ ಕಾಯುತ್ತಿದ್ದರು ಎಂದು ಊಹಿಸಿಕೊಳ್ಳಬಹುದಾಗಿದ್ದು, ರಾಷ್ಟ್ರಕೂಟರ ಶಕ್ತಿಯು ಇಳಿಮುಖವಾದಾಗ, ಇಮ್ಮಡಿ ತೈಲಪನು ಅವರಿಗೆ ಮಾರಣಾಂತಿಕ ಪೆಟ್ಟು ನೀಡುವ ಅವಕಾಶವನ್ನು ತಪ್ಪಿಸಿಕೊಳ್ಳಲಿಲ್ಲ.

ರಾಷ್ಟ್ರಕೂಟರ ಮೇಲಿನ ಪರಮಾರರ ದಾಳಿಯ ಸಂದರ್ಭವನ್ನು ಬಳಸಿಕೊಂಡು, ಕ್ರಿ.ಶ.೯೭೩ರಲ್ಲಿ ಇಮ್ಮಡಿ ಕರ್ಕನನ್ನು ಇಮ್ಮಡಿ ತೈಲಪನು ಪದಚ್ಯುತಿಗೊಳಿಸಿ, ತನ್ನ ಸ್ವಾತಂತ್ರ್ಯವನ್ನು ಘೋಷಿಸಿ, ಕ್ರಿ.ಶ.೯೭೩–೯೯೭ರವರೆಗೂ ಆಳಿದನು. ರಾಷ್ಟ್ರಕೂಟರಿಗೆ ನೆರವು ಸೂಚಿಸಿದ ಗಂಗರು, ಇಮ್ಮಡಿ ತೈಲನಿಗೆ ವಿರೋಧವನ್ನು ವ್ಯಕ್ತಪಡಿಸಿದರೂ ಅಷ್ಟಾಗಿ ಯಶಸ್ಸನ್ನು ಕಾಣಲಿಲ್ಲ. ಕ್ರಿ.ಶ.೯೯೨ರಲ್ಲಿ ರಾಜರಾಜ ಚೋಳನನ್ನು ತೈಲನು ಸೋಲಿಸಿದರೆ ಕ್ರಿ.ಶ.೯೯೫ರಲ್ಲಿ ಅವನ ಮಗನಾದ ಅಹವಮಲ್ಲನು ಚೋಳ ಸೈನ್ಯವನ್ನು ಮತ್ತೊಮ್ಮೆ ಸೋಲಿಸಿದನು. ತನ್ಮೂಲಕ ಚಾಳುಕ್ಯ ಆಳ್ವಿಕೆಗೆ ತೈಲನು ಭದ್ರ ಬುನಾದಿಯನ್ನು ಹಾಕಿದನು. ಅವನಿಗೆ ಸತ್ಯಾಶ್ರಯ ಹಾಗೂ ದಶವರ್ಮರೆಂಬ ಇಬ್ಬರು ಗಂಡು ಮಕ್ಕಳಿದ್ದು ಅವನ ಮರಣದ ನಂತರ, ಸತ್ಯಾಶ್ರಯನು ಸಿಂಹಾಸನವನ್ನು ಏರಿದನು.

ಅಹವಮಲ್ಲ, ಇರಿವಬೆಡಂಗ ಹಾಗೂ ಸಾಹಸಾಭಿಮಾನ ಎಂಬ ಬಿರುದುಗಳನ್ನು ಹೊಂದಿದ ಸತ್ಯಾಶ್ರಯನು ಕ್ರಿ.ಶ.೯೯೭–೧೦೦೮ರವರೆಗೂ ಆಳಿದನು. ಚೋಳರು ಹಾಗೂ ಚಾಳುಕ್ಯರ ನಡುವಣ ವೈಷಮ್ಯವು ಈ ಅವಧಿಯಲ್ಲೂ ನಡೆದೇ ಇತ್ತು. ಕನ್ನಡದ ಅತ್ಯಂತ ಮಹಾನ್ ಕವಿಗಳಲ್ಲಿ ಒಬ್ಬನಾದ ರನ್ನನಿಗೆ ಸತ್ಯಾಶ್ರಯನು ಆಶ್ರಯ ನೀಡಿದ್ದನು. ಇವನ ಮರಣದ ನಂತರ, ಸೋದರಳಿಯನಾದ (ದಶವರ್ಮನ ಮಗ) ಐದನೆಯ ವಿಕ್ರಮಾದಿತ್ಯನು ಸಿಂಹಾಸನವನ್ನು ಏರಿ, ಎಂಟು ವರ್ಷಗಳ ಕಾಲ ರಾಜ್ಯಭಾರ ಮಾಡಿದನು. ಇವನು ದುರ್ಬಲ ರಾಜನಾಗಿದ್ದು, ಚೋಳರು ಹಾಗೂ ಪರಮಾರರು ಸುಲಭವಾಗಿ ಧಾಳಿ ಮಾಡಿದರಾದರೂ ರಾಜ್ಯದ ಮೇಲೆ ಅಂತಹ ಆಪತ್ತೇನೂ ಒದಗಲಿಲ್ಲ. ಇವನ ನಂತರ, ಅವನ ಸಹೋದರ ಅಯ್ಯಣನು ಕೆಲವು ತಿಂಗಳು ಮಾತ್ರ ರಾಜ್ಯವಾಳಿದನಾದರೂ ನಂತರದಲ್ಲಿ ಸಿಂಹಾಸನವನ್ನು ಸಹೋದರ ಇಮ್ಮಡಿ ಜಯಸಿಂಹನಿಗೆ ಬಿಟ್ಟುಕೊಟ್ಟನು.

ಕ್ರಿ.ಶ.೧೦೧೫–೪೨ರ ನಡುವಣ ಅವಧಿಯಲ್ಲಿ ಆಳಿದ ಜಯಸಿಂಹನು, ಜಗದೇಕಮಲ್ಲ ಹಾಗೂ ಮಲ್ಲಿಕಮೋಧೆಂಬ ಬಿರುದನ್ನು ಹೊಂದಿದ್ದನು. ಅವನ ತಕ್ಷಣದ ಕಳಕಳಿಯು ಪರಮಾರ ಭೋಜ,



ದೇವಾಲಯ ಸಂಕೀರ್ಣ, ಪಟ್ಟದಕಲ್ಲು ಬಾಗಲಕೋಟ ಜಿಲ್ಲೆ



ಪಾಪನಾಥ ದೇವಾಲಯ ಪಟ್ಟದಕಲ್ಲು, ಬಾಗಲಕೋಟೆ ಜಿಲ್ಲೆ



ಗಳಗನಾಥ ದೇವಾಲಯ, ಪಟ್ಟದಕಲ್ಲು, ಬಾಗಲಕೋಟೆ ಜಿಲ್ಲೆ



ಪಾರ್ವತಿ-ಕಾರ್ತಿಕೇಯ ದೇವಾಲಯ ಸಂಕೀರ್ಣ,
ಸೊಂಡೂರು, ಬಳ್ಳಾರಿ ಜಿಲ್ಲೆ



ಕಲಚುರಿ ಗಂಗೇಯದೇವ ಹಾಗೂ ರಾಜೇಂದ್ರ ಚೋಳರ ಸಂಘಟನೆಯನ್ನು ಎದುರಿಸುವುದಾಗಿತ್ತು. ಕ್ರಿ.ಶ.೧೦೧೮ರ ಸುಮಾರಿಗೆ, ಗೋದಾವರಿ ದಡದ ಮೇಲೆ ಭೀಕರ ಕಾಳಗವು ನಡೆದು, ಅದರ ಫಲವಾಗಿ ಭೋಜನು ಕೊಂಕಣವನ್ನು ಆಕ್ರಮಿಸಿಕೊಂಡು, ಚಾಳುಕ್ಯ ರಾಜಧಾನಿಯನ್ನು ರಾಜೇಂದ್ರ ಚೋಳನು ಸುಡುವ ಮೂಲಕ ಅಂತ್ಯಗೊಂಡಿತು. ಸ್ವಲ್ಪ ಸಮಯದ ನಂತರ, ಜಯಸಿಂಹನು ಭೋಜನನ್ನು ಸೋಲಿಸಿ ಮೇಲುಗೈ ಸಾಧಿಸಿ, ಕೊಂಕಣವನ್ನು ಮರಳಿ ಪಡೆದನು. ಮುಮ್ಮಡಿ ಸೇವುಣ ಭಿಲ್ಲಮನನ್ನೂ ಸೋಲಿಸಿ, ಅವನ ಕುಟುಂಬದವರೊಡನೆ ವೈವಾಹಿಕ ಸಂಬಂಧವನ್ನು ಬೆಳೆಸುವ ಮೂಲಕ ಚಾಳುಕ್ಯ ರಾಜ್ಯವನ್ನು ಕಾಪಾಡಿದನು. ದೇವಲಾದೇವಿ, ಸುಗ್ಗಲಾದೇವಿ ಹಾಗೂ ಲಕ್ಷ್ಮೀದೇವಿ ಈತನ ರಾಣಿಯರಾಗಿದ್ದು ಜಗದೇಕಮಲ್ಲ ಎಂದು ಟಂಕಿಸಿರುವ ಪದ್ಮಟಂಕ ನಾಣ್ಯಗಳನ್ನು ಚಲಾವಣೆಗೆ ತಂದನು. ಈತನ ಮರಣದ ನಂತರ, ದೊಡ್ಡ ಮಗನಾದ ಮೊದಲನೆಯ ಸೋಮೇಶ್ವರನು ಸಿಂಹಾಸನವನ್ನು ಅಲಂಕರಿಸಿದನು.

ಕ್ರಿ.ಶ.೧೦೪೪–೬೮ರವರೆಗೂ ಆಳಿದ ಒಂದನೆಯ ಸೋಮೇಶ್ವರನು ತ್ರೈಲೋಕ್ಯಮಲ್ಲನೆಂದೂ ಕರೆಯಲ್ಪಡುತ್ತಿದ್ದು, ಈತನು ಚೋಳರೊಡನೆ ಯುದ್ಧವನ್ನು ಮುಂದುವರಿಸಿದ್ದು, ಯುದ್ಧಗಳ ಕೂಲಂಕಷ ವಿವರಣೆಯನ್ನು ಶಾಸನಗಳು ನೀಡುತ್ತವೆ.ಈ ಸೇನಾ ಕದನಗಳ ನಡುವೆಯೂ ಆತನು ರಾಜಧಾನಿಯಾದ ಕಲ್ಯಾಣವನ್ನು ನಿರ್ಮಾಣ ಮಾಡಿ, ಅದನ್ನು ಸುಪ್ರಸಿದ್ಧಗೊಳಿಸಿದನು. ಆತನಿಗೆ ಅನೇಕ ಸಾಮಂತ ರಾಜರಿದ್ದರು; ಅವರ ಪೈಕಿ, ಹೊಯ್ಸಳ ವಿನಯಾದಿತ್ಯ ಹಾಗೂ ಗೋವಾದ ಕದಂಬ ವಂಶದ ಒಂದನೆಯ ಜಯಕೇಶಿಯು ಸುಪ್ರಸಿದ್ಧರು.ಬಿಲ್ಹಣನ ಪ್ರಕಾರ, ಗಂಭೀರ ರೀತಿಯ ಜ್ವರದಿಂದ ನರಳುತ್ತಿದ್ದ ಸೋಮೇಶ್ವರನು ಕ್ರಿ.ಶ.೧೦೬೮ರಲ್ಲಿ ತುಂಗಭದ್ರಾ ನದಿಗೆ ಧುಮುಕಿ ಜಲಸಮಾಧಿಯಾದನು.

ಆತನ ನಂತರ, ಆತನ ಮಗನಾದ ಇಮ್ಮಡಿ ಸೋಮೇಶ್ವರನು ಸಿಂಹಾಸನವನ್ನೇರಿ, ಕ್ರಿ.ಶ.೧೦೭೬ರವರೆಗೂ ಆಳಿದನು.ಇವನ ಜನಪ್ರಿಯ ಬಿರುದಾದ 'ಭುವನೈಕಮಲ್ಲ' ಎಂಬ ಹೆಸರು ಚಿನ್ನದ ನಾಣ್ಯಗಳ ಮೇಲೂ ಕಾಣಿಸುತ್ತವೆ. ಒಂದನೆಯ ಸೋಮೇಶ್ವರನ ಮಗನಾದ ಆರನೆಯ ವಿಕ್ರಮಾದಿತ್ಯನು ರಾಜ್ಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಚಿಂತನೆಯನ್ನು ಮಾಡಿದನು. ಇದಕ್ಕೆ ಕಾರಣ, ಸಹೋದರನ ನಿಷ್ಠೆಯ ಬಗ್ಗೆ ಅವನಿಗಿದ್ದ ಶಂಕೆಗಳು. ನಂತರದ ಹಂತದಲ್ಲಿ, ತಮ್ಮ ಜಯಸಿಂಹ, ಜಯಕೇಶಿ, ಹಾನಗಲ್ ಕದಂಬ ಕೀರ್ತಿವರ್ಮ, ಸೇವುಣಚಂದ್ರ ಹಾಗೂ ಇತರರ ನೆರವಿನೊಂದಿಗೆ, ವಿಕ್ರಮಾದಿತ್ಯನು ತನ್ನ ಸಹೋದರ, ಇಮ್ಮಡಿ ಸೋಮೇಶ್ವರನನ್ನು, ಬಹಿರಂಗವಾಗಿಯೇ ವಿರೋಧಿಸಿ ವಿಜಯಶಾಲಿಯಾಗಿ, ಕ್ರಿ.ಶ.೧೦೭೬ರಲ್ಲಿ ಸಿಂಹಾಸನವನ್ನು ಏರಿದನು.

ಕ್ರಿ.ಶ.೧೦೭೬–೧೧೨೬ರವರೆಗೂ ಆರನೆಯ ವಿಕ್ರಮಾದಿತ್ಯನು ರಾಜ್ಯವಾಳಿದನು.ಆತನು ಸಿಂಹಾಸನವನ್ನೇರಿದ ದಿನಾಂಕದಿಂದ, ಹೊಸ ಶಕೆಯನ್ನು ಪ್ರಾರಂಭಿಸಿ, ಅದನ್ನು ಚಾಳುಕ್ಯ–ವಿಕ್ರಮ–ವರ್ಷವೆಂದು ಕರೆದನು. ಅವಿರತವಾಗಿ ಚೋಳರ ವಿರುದ್ಧ ಆತನ ಪೂರ್ವಜರು ನಡೆಸುತ್ತಿದ್ದ ಯುದ್ಧನಿತಿಯನ್ನು ಮುಂದುವರೆಸಿದರೂ, ಆರನೆಯ ವಿಕ್ರಮಾದಿತ್ಯ ಹಾಗೂ ಚೋಳ ಕುಲೋತ್ತುಂಗರ ನಡುವಣ ಕಿರು ಕಾಳಗಗಳು, ಉಭಯತ್ರರಿಗೂ ಯಾವುದೇ ರೀತಿಯ ಪ್ರಯೋಜನವನ್ನು ತರಲಿಲ್ಲ. ವಿಕ್ರಮಾದಿತ್ಯನು ಇತರ ಯುದ್ಧರಂಗಗಳಲ್ಲೂ ಕಾಳಗ ನಡೆಸಬೇಕಾಯಿತು. ತಾನು ಸಿಂಹಾಸನವನ್ನು ಏರಲು ನೆರವು ನೀಡಿದ ಸಹೋದರನಾದ ನಾಲ್ಕನೆಯ ಜಯಸಿಂಹನನ್ನು ರಾಜ್ಯಪಾಲನನ್ನಾಗಿ ಮಾಡುವುದಲ್ಲದೆ, ಬನವಾಸಿ, ಸಾಂತಳಿಗೆ, ಕುಂದೂರು, ಇತ್ಯಾದಿ ಪ್ರಾಂತಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸಿಕೊಂಡ ವಿಕ್ರಮಾದಿತ್ಯನ ವಿರುದ್ಧ ಅವನು ದಂಗೆಯೆದ್ದನು. ಕ್ರಿ.ಶ.೧೦೮೨ರಲ್ಲಿ ವಿಕ್ರಮಾದಿತ್ಯನು ಅವನನ್ನು ಸೋಲಿಸಿದನು. ಅಲ್ಲದೆ ಕ್ರಿ.ಶ.೧೦೮೮ರಲ್ಲಿ, ವಿಕ್ರಮಾದಿತ್ಯನು ಸಿಲ್ಹಾರ ಭೋಜ, ಅಳುಪರು, ಪರಮಾರ ನಾಗವಾರ ಹಾಗೂ ವಿಜಯಾದಿತ್ಯರನ್ನೂ ಸೋಲಿಸಿ, ನಂತರ ಧಾರಾನಗರಿಯ ಜಗ್ಗದೇವನಿಗೆ ನೆರವು ನೀಡಿದನು.ಆದರೆ, ಜಗ್ಗದೇವನು ತನ್ನ ರಾಜ್ಯವನ್ನು ಪರಿತ್ಯಜಿಸಿ ಆರನೆಯ ವಿಕ್ರಮಾದಿತ್ಯನೊಂದಿಗೆ ಆತನ ಸಾಮಂತನಾಗಿ ಬಾಳಿದನು. ಹಾಗಾಗಿ, ಅವನ ರಾಜ್ಯವು ನರ್ಮದಾ ನದಿಯವರೆಗೂ ವಿಸ್ತರಣೆಗೊಂಡಿತ್ತು. ಗೂರ್ಜರ ಸಿಂಧುರಾಜ, ಕಳಚುರಿ ಬಿಜ್ಜಳದೇವ ಹಾಗೂ ತ್ರಿಪುರಿಯ ಅರಸನನ್ನೂ ಆತನು ಸೋಲಿಸಿದನು.ವೆಂಗಿಯ ಅರಸ, ಅಂದರೆ ಪೂರ್ವ ಚಾಳುಕ್ಯ ಅರಸನು ಚೋಳ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದ ಕಾರಣ ಆ ರಾಜ್ಯದ ಕೆಲವು ಭಾಗಗಳೂ ಆರನೆಯ ವಿಕ್ರಮಾದಿತ್ಯನ ಕ್ಷೇತ್ರಕ್ಕೇ ಸೇರ್ಪಡೆಯಾಯಿತು.ಸ್ವಾತಂತ್ರವನ್ನು ಘೋಷಿಸಿಕೊಳ್ಳುವ ಸಲುವಾಗಿ, ಹೊಯ್ಸಳ ವಿಷ್ಣುವರ್ಧನನು ಚಾಳುಕ್ಯ ಪ್ರದೇಶದಲ್ಲಿ ಸಣ್ಣ ಪ್ರಮಾಣದ ಅನಿರೀಕ್ಷಿತ ದಾಳಿಗಳನ್ನು ಮಾಡಲು ಪ್ರಾರಂಭಿಸಿದನು.ಆತನ ಕುತಂತ್ರವನ್ನು ಅರಿತ ವಿಕ್ರಮಾದಿತ್ಯನು, ಹೊಯ್ಸಳ ವಿಷ್ಣುವರ್ಧನನನ್ನು ಸದೆಬಡಿಯಲು ಪರಮಾರ ಜಗ್ಗದೇವನನ್ನು ನೇಮಕ ಮಾಡಿದನು, ಆದರೆ ಜಗ್ಗದೇವನನ್ನು ಆತನು ಸೋಲಿಸಿದನು.ಅವರಿಬ್ಬರ ನಡುವೆ ಕನ್ನೇಗಾಲದಲ್ಲಿ ಮತ್ತೊಂದು ಯುದ್ಧವು ನಡೆಯಿತು. ಅದರಲ್ಲಿ ಮಹಾನ್ ಹೊಯ್ಸಳ ಮಂತ್ರಿಯಾದ ಗಂಗರಾಜನು ಚಾಳುಕ್ಯ ಸೈನ್ಯವನ್ನು ಸೋಲಿಸಿದನು. ಹಲಸೂರು ಹಾಗೂ ಹೊಸವೀಡುಗಳಲ್ಲಿ ನಡೆದ ಯುದ್ಧಗಳಲ್ಲಿ, ಹೊಯ್ಸಳರು ಸೋಲಿಸಲ್ಪಟ್ಟು ವಿಷ್ಣುವರ್ಧನನು ಸಾಮಂತರಾಜನ ಸ್ಥಾನವನ್ನು ಒಪ್ಪಿಕೊಂಡನು.

ಕರ್ನಾಟಕದ ಚರಿತ್ರೆಯಲ್ಲಿ, ವಿಕ್ರಮಾದಿತ್ಯನ ೫೦ ವರ್ಷಗಳ ಆಳ್ವಿಕೆಯು ವೈಭವೋಪೇತ ಯುಗವಾಗಿತ್ತು. ಶಾಂತಿ ಹಾಗೂ ಸಮೃದ್ಧಿಯು ನೆಲೆಸಿ, ಸಾಂಸ್ಕೃತಿಕ ಅಭಿವೃದ್ಧಿಗಳು ಉಂಟಾದವು.ಯಾಜ್ಞವಲ್ಕ್ಯಸ್ಮೃತಿಯ ಭಾಷ್ಯವಾದ ಮಿತಾಕ್ಷರವನ್ನು ಬರೆದ ಸುಪ್ರಸಿದ್ಧ ನ್ಯಾಯಮೂರ್ತಿಯಾದ ವಿಜ್ಞಾನೇಶ್ವರನು, ಆಶ್ರಯದಾತನಾದ ಆರನೆಯ ವಿಕ್ರಮಾದಿತ್ಯನ ಆಳ್ವಿಕೆ ಕುರಿತಾಗಿ ಭವ್ಯವಿವರಣೆಗಳನ್ನು ಸಲ್ಲಿಸಿದನು. ಆರನೆಯ ವಿಕ್ರಮಾದಿತ್ಯನ ಜೀವನ ಸಾಧನೆಗಳನ್ನು ಕುರಿತಾಗಿ ಮಾಹಿತಿಯ ಗಣಿಯಾದ ವಿಕ್ರಮಾಂಕದೇವಚರಿತವನ್ನು ರಚಿಸಿದ ಆಸ್ಥಾನ ಕವಿಯಾದ

ಬಿಲ್ಹಣನನ್ನೂ ಈ ಅವಧಿಗೆ ಸೇರಿದವನಾಗಿದ್ದನು.ಅನೇಕ ಶಾಸನಗಳೂ, ವಿಕ್ರಮಾದಿತ್ಯನ ಆಳ್ವಿಕೆಯ ಭವ್ಯವಿವರಣೆಗಳನ್ನು ಹೊಂದಿವೆ. ಮಹಾನ್ ಸಂಪನ್ನತೆಗಳ ಆಗರವಾದ ಆತನ ರಾಣಿಯಾದ ಚಂದಲಾದೇವಿಯನ್ನು ನಾಟ್ಯ-ವಿದ್ಯಾಧರಿ, ಅಭಿನವ ಸರಸ್ವತಿ, ಮುಂತಾಗಿ ವರ್ಣಿಸಲಾಗಿದೆ.ವಾಸ್ತು ಸೌಂದರ್ಯ ಹಾಗೂ ಉತ್ತಮ ಶಿಲ್ಪಕಲೆಗಾಗಿ ಹೆಸರುವಾಸಿಯಾದ ಅನೇಕ ದೇವಾಲಯಗಳನ್ನು ಈ ಅವಧಿಯಲ್ಲಿ ನಿರ್ಮಿಸಲಾಯಿತು.ಜಲಸಂಗಿಯ (ಬೀದರ್ ಜಿಲ್ಲೆ) ದೇವಾಲಯದಲ್ಲಿ, ಆರನೆಯ ವಿಕ್ರಮಾದಿತ್ಯನನ್ನು ಹೊಗಳುವ ಶಾಸನವೊಂದನ್ನು ಬರೆಯುತ್ತಿರುವ ಶಾಸನ ಸುಂದರಿಯ ಸುಂದರ ಶಿಲ್ಪವಿದೆ.ಅರ್ಧ ಶತಮಾನದ ಸುದೀರ್ಘ ಆಳ್ವಿಕೆಯ ನಂತರ, ಆರನೆಯ ವಿಕ್ರಮಾದಿತ್ಯನು ಕ್ರಿ.ಶ.೧೧೨೬ರಲ್ಲಿ ಮರಣ ಹೊಂದಿದನು.ಅದೇ ವರ್ಷದಲ್ಲಿ ಇವನ ಮಗನಾದ ಮುಮ್ಮಡಿ ಸೋಮೇಶ್ವರನು ಆತನ ಉತ್ತರಾಧಿಕಾರಿಯಾದನು.

ಕ್ರಿ.ಶ.೧೧೨೬-೩೮ರವರೆಗೂ ಆಳಿದ ಮುಮ್ಮಡಿ ಸೋಮೇಶ್ವರನು ಭೂಲೋಕಮಲ್ಲನೆಂಬ ಬಿರುದನ್ನು ಧರಿಸಿದ್ದ ಹೊಯ್ಸಳ ವಿಷ್ಣುವರ್ಧನನು ಸ್ವತಂತ್ರನಾಗಲು ಈ ಅವಧಿಯಲ್ಲಿ ಯಾವುದೇ ರೀತಿಯ ಯತ್ನವನ್ನೂ ಮಾಡದೆ, ವಿಧೇಯನಾಗೇ ಇದ್ದನು. ಯುದ್ಧಗಳಿಲ್ಲದ ಕಾರಣದಿಂದ, ಸಾಹಿತ್ಯ-ಸಾಂಸ್ಕೃತಿಕ ಹವ್ಯಾಸಗಳಿಗಾಗಿ ಹೆಚ್ಚಿನ ಸಮಯ ಹಾಗೂ ಚೈತನ್ಯವನ್ನು ಮೀಸಲಿಡಲು ರಾಜನಿಗೆ ಸಾಧ್ಯವಾಯಿತು. ಕ್ರಿ.ಶ.೧೧೨೯ರಲ್ಲಿ, ವಿಶ್ವಕೋಶ ಸ್ವರೂಪದ 'ಅಭಿಲಾಷಿತಾರ್ಥ-ಚಿಂತಾಮಣಿ' ಎಂದು ಕರೆದನು; ಅದು 'ಮಾನಸೋಲ್ಲಾಸ'ವೆಂದೂ ಜನಪ್ರಿಯವಾಗಿದೆ. ಆತನ ಮತ್ತೊಂದು ಕೃತಿಯೆಂದರೆ ಚಂಪುಕಾವ್ಯವಾದ 'ವಿಕ್ರಮಾಂಕಾಭ್ಯುದಯ'. ಮಹಾನ್ ಪಾಂಡಿತ್ಯವುಳ್ಳ ಆತನನ್ನು ಸರ್ವಜ್ಞ ಚಕ್ರವರ್ತಿ ಎಂದು ಕರೆಯುತ್ತಿದ್ದರು. ಇವನಿಗೆ ಇಮ್ಮಡಿ ಜಗದೇಕಮಲ್ಲ ಹಾಗೂ ಮುಮ್ಮಡಿ ತೈಲಪನೆಂಬ ಇಬ್ಬರು ಗಂಡುಮಕ್ಕಳಿದ್ದರು. ಕ್ರಿ.ಶ.೧೧೩೮-೪೯ರವರೆಗೂ ಆಳಿದ ೨ನೆಯ ಜಗದೇಕಮಲ್ಲನು ಕ್ರಿ.ಶ.೧೧೩೮ರಲ್ಲಿ ರಾಜ್ಯಭಾರವನ್ನು ವಹಿಸಿಕೊಂಡನು. ಇವನು ಅರಸನಾದಾಗಲೇ ಮುದುಕನಾಗಿದ್ದನು; ಹಾಗಾಗಿ ಇಂತಹ ಪರಿಸ್ಥಿತಿಯಲ್ಲಿ, ಚಾಳುಕ್ಯ ಸಾಮ್ರಾಜ್ಯವನ್ನು ಆಳಲು ಅವನಿಂದ ಸಾಧ್ಯವಾಗಲಿಲ್ಲ.

ಕಾಕತೀಯ ಸಾಮಂತನಾದ ಎರಡನೆಯ ಪ್ರೋಲನು ತನ್ನ ಶಕ್ತಿಯನ್ನು ಬಲಪಡಿಸಿಕೊಂಡನಲ್ಲದೆ, ಪೂರ್ವ ಕರಾವಳಿಯ ಬಹುತೇಕ ಪ್ರದೇಶಗಳನ್ನು ಚಾಳುಕ್ಯರ ಆಳ್ವಿಕೆಯಿಂದ ಬಿಡಿಸಿದನು.ಹೊಯ್ಸಳ ವಿಷ್ಣುವರ್ಧನನು ಪುನಃ ದಂಗೆಯೆದ್ದು, ಕದಂಬರನ್ನು ಸೋಲಿಸಿ, ಹಾನಗಲ್, ಬಂಕಾಪುರ ಹಾಗೂ ಬನವಾಸಿಗಳನ್ನು ಆಕ್ರಮಿಸಿಕೊಂಡನು. ಆದರೆ ನಿಷ್ಠಾವಂತ ಅಧಿಕಾರಿಗಳ ನೆರವಿನೊಡನೆ, ಎರಡನೆಯ ಜಗದೇಕಮಲ್ಲನು ಈ ಪ್ರದೇಶಗಳನ್ನು ಮರಳಿ ಪಡೆದನು. ಕಲಚುರಿಯ ಮುಖ್ಯಸ್ಥನಾದ ಬಿಜ್ಜಳನೂ ಸಹ, ಸ್ವತಂತ್ರನಾಗಲು ವಿಸ್ತೃತವಾದ ತಯಾರಿಯನ್ನು ನಡೆಸಿ, ಅವಕಾಶವೊಂದಕ್ಕಾಗಿ ಕಾಯುತ್ತಿದ್ದನು.


ಶಿವಾದೇವಾಲಯದ ಪಾರ್ಶ್ವನೋಟ, ಜಲಸಂಗಿ, ಹುಮ್ನಬಾದ್ ತಾಲೂಕು ಬೀದರ್ ಜಿಲ್ಲೆ

ಇಮ್ಮಡಿ ಜಗದೇಕಮಲ್ಲನಿಗೆ ಗಂಡುಮಕ್ಕಳಿಲ್ಲದ ಕಾರಣ, ಈತನ ನಂತರ ಸಹೋದರನಾದ ಮುಮ್ಮಡಿ ತೈಲಪನು ಸಿಂಹಾಸನವನ್ನು ಏರಿ, ಕ್ರಿ.ಶ.೧೧೪೯-೬೨ರವರೆಗೂ ರಾಜ್ಯವಾಳಿದನು. ಮುಮ್ಮಡಿ ತೈಲಪನ ವಿರುದ್ಧ ದಂಗೆಯೆದ್ದ ಕಲಚುರಿ ಬಿಜ್ಜಳ, ಚಾಳುಕ್ಯರ ಪತನಕ್ಕೆ ಬಹುತೇಕವಾಗಿ ಹೊಣೆಗಾರನಾದನು. ಕ್ರಿ.ಶ.೧೧೫೭ರ ವೇಳೆಗೆ, ಆತನು ಸ್ವಾತಂತ್ರ್ಯವನ್ನು ಘೋಷಿಸಿ, ಚಾಳುಕ್ಯ ಸಾಮ್ರಾಜ್ಯದ ಬಹುತೇಕ ಭಾಗಗಳನ್ನು ಆಕ್ರಮಿಸಿಕೊಂಡನು. ಶಿಲಹಾರರು ಹಾಗೂ ಹೊಯ್ಸಳರೂ ಸ್ವತಂತ್ರರಾದರು. ಕಾಕತೀಯ ಅರಸನಾದ ರುದ್ರದೇವನು ಸ್ವತಂತ್ರನಾಗಿದ್ದಲ್ಲದೆ, ಮುಮ್ಮಡಿ ತೈಲಪನನ್ನು ಯುದ್ಧವೊಂದರಲ್ಲಿ ಸೋಲಿಸಿದನು. ಚಾಳುಕ್ಯರ ಸ್ಥಾನದಲ್ಲಿ, ಬಿಜ್ಜಳನು ಕಲಚುರಿ ಆಳ್ವಿಕೆಯನ್ನು ಸ್ಥಾಪಿಸಿದನು.

## ಕಲಚೂರ್ಯರ ಮಧ್ಯಂತರ ಆಳ್ವಿಕೆ

ಮಧ್ಯಪ್ರದೇಶವನ್ನು ಆಳಿದ ಕಲಚೂರ್ಯ ಕುಟುಂಬಕ್ಕೆ ಸೇರಿದವರು ಕಲಚುರಿಗಳು.ಕಾಲಾಂತರದಲ್ಲಿ, ತಮ್ಮ ಅದೃಷ್ಟವನ್ನು ಅರಸುತ್ತ, ಒಂದು ಕುಟುಂಬವು ಕರ್ನಾಟಕಕ್ಕೆ ವಲಸೆ ಬಂದಿತು. ಅವರು ಹೈಹಯ-ಕುಲಕ್ಕೆ ಸೇರಿದವರಾಗಿದ್ದು, ಅವರ ಮೂಲ ತಾಣವು ನರ್ಮದಾ ನದಿಯ ದಡದಲ್ಲಿದ್ದ ಮಹಿಸ್ಮತಿ ಆಗಿತ್ತು. ಕಲಚೂರ್ಯ ಕುಟುಂಬದ ಪ್ರಾರಂಭಿಕ ಅರಸರ ಹೆಸರುಗಳು ಕ್ರಿ.ಶ.೧೦ನೆಯ ಶತಮಾನದಿಂದ ದೊರೆಯುತ್ತವೆ. ಆರನೆಯ ವಿಕ್ರಮಾದಿತ್ಯನ ಮೊಮ್ಮಗನು ಪೆರ್ಮಾಡಿಯ

ಮಗನಾದ ಇಮ್ಮಡಿ ಬಿಜ್ಜಳನು. ಮುಮ್ಮಡಿ ಚಾಳುಕ್ಯ ತೈಲಪನನ್ನು ಸೋಲಿಸಿ, ಕಲಚುರಿ ರಾಜ್ಯದ ಸ್ಥಾಪನೆಯನ್ನು ಮಾಡಿದನು. ಬಿಜಾಪುರ ಪ್ರದೇಶದಲ್ಲಿ, ಚಾಳುಕ್ಯರ ಸಾಮಂತರಾಗಿ ಆಳಿ, ಅವರೊಂದಿಗೆ ವಿವಾಹ ಸಂಬಂಧಗಳನ್ನು ಬೆಳೆಸಿಕೊಂಡರು.

ಚಾಳುಕ್ಯರ ಸಾಮಂತನಾಗಿ ಇಮ್ಮಡಿ ಬಿಜ್ಜಳನು ಕ್ರಿ.ಶ.೧೧೩೦ರಲ್ಲಿ ಸೇವೆಯನ್ನು ಪ್ರಾರಂಭಿಸಿದನು. ಮುಮ್ಮಡಿ ತೈಲಪನು ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಸಾಧ್ಯವಾಗದಾಗ, ಬಿಜ್ಜಳನು ಸಾಮ್ರಾಜ್ಯಶಾಹಿ ಬಿರುದುಗಳನ್ನು ತಾನೇ ಧರಿಸಿಕೊಂಡನು. ಕ್ರಿ.ಶ.೧೧೫೩ರ ಪ್ರಾರಂಭದಲ್ಲೇ, ತನ್ನ ಹೆಸರಿನಲ್ಲಿ ಶಕೆವನ್ನು ಪ್ರಾರಂಭಿಸಿದನು. ಸುಮಾರು ಕ್ರಿ.ಶ.೧೧೬೨ರ ವೇಳೆಗೆ, ಬಿಜ್ಜಳನು ಮುಮ್ಮಡಿ ತೈಲಪನನ್ನು ಪದಚ್ಯುತಗೊಳಿಸಿ, ಸಿಂಹಾಸನವನ್ನು ಆಕ್ರಮಿಸಿಕೊಂಡನು, ಆದರೆ ಚಾಲುಕ್ಯರಿಗೆ ನಿಷ್ಠಾವಂತರಾದ ಸಾಮಂತರು ಹಾಗೂ ಇತರರು ನೀಡಿದ ಪ್ರಬಲ ವಿರೋಧದಿಂದ, ಬಿಜ್ಜಳನು ಕೇವಲ ಐದು ವರ್ಷಗಳು ಮಾತ್ರ ಆಳಲು ಸಾಧ್ಯವಾಯಿತು. ಬಿಜ್ಜಳನ ಎಲ್ಲ ರಾಜಕೀಯ ಚಟುವಟಿಕೆಗಳಲ್ಲೂ, ಬಹಳಷ್ಟು ನೆರವಾದವನು, ಆತನ ಸಮರ್ಥ ಸೇನಾಧಿಪತಿಯಾದ ಕಸಪಯ್ಯನಾಯಕ. ಸುಪ್ರಸಿದ್ಧ ಧಾರ್ಮಿಕ ಮುಖಂಡನಾದ ಬಸವೇಶ್ವರನು ಬಿಜ್ಜಳನ ಖಜಾಂಚಿಯಾಗಿದ್ದನು.

ಕ್ರಿ.ಶ.೧೧೬೭ರಲ್ಲಿ ಬಿಜ್ಜಳನ ಮರಣಾನಂತರ, ಆತನ ಮಗನಾದ ರಾಯಮುರಾರಿ ಸೋವಿದೇವನು ರಾಜನಾದನು.ಆತನ ಸಾಮಂತರಲ್ಲಿ ಕುತಂತ್ರಗಳು ಹೆಚ್ಚಿದ ಕಾರಣ ಬಹಳಷ್ಟು ಗೊಂದಲ ಉಂಟಾಯಿತು. ಕ್ರಿ.ಶ.೧೧೭೫ರಲ್ಲಿ ಸೋವಿದೇವನ ನಂತರ ಮಲ್ಲಿಕಾರ್ಜುನನು ಅಧಿಕಾರಕ್ಕೆ ಬಂದನು; ಆದರೆ, ಒಂದು ವರ್ಷದ ಒಳಗಾಗಿ ತನ್ನ ರಾಜ್ಯವನ್ನು ಕಳೆದುಕೊಂಡನು. ಮುಂದಿನ ೧೦ ವರ್ಷಗಳಲ್ಲಿ, ಸಂಕಮ, ಅಹವಮಲ್ಲ ಹಾಗೂ ಸಿಂಘನರಿಂದ ಆಳಲ್ಪಟ್ಟರು. ಕ್ರಿ.ಶ.೧೧೮೪ರ ವೇಳೆಗೆ, ತಲೆಮರೆಸಿಕೊಂಡಿದ್ದ ಚಾಳುಕ್ಯ ರಾಜಕುಮಾರನಾದ ನಾಲ್ಕನೆಯ ಸೋಮೇಶ್ವರನು, ಮತ್ತೆ ಹಿಂತಿರುಗಿ ಬಂದು, ಕಲಚುರಿಗಳನ್ನು ಸೋಲಿಸಿದನು. ಈ ಯತ್ನದಲ್ಲಿ, ಸೇನಾಧಿಪತಿಯಾದ ಬ್ರಹ್ಮನು ಆತನಿಗೆ ಸಮರ್ಥವಾದ ನೆರವನ್ನು ನೀಡಿದನು. ಆದರೆ ಶಾಂತಿಯಿಂದ ಆಳ್ವಿಕೆ ನಡೆಸಲು ಬೇರೆ ಎರಡು ರಾಜಕುಟುಂಬಗಳು ಆತನಿಗೆ ಅವಕಾಶ ನೀಡಲಿಲ್ಲ. ಆ ವೇಳೆಗಾಗಲೇ, ನಾಲ್ಕನೆಯ ಸೋಮೇಶ್ವರನ ಅಧಿಕಾರಕ್ಕೆ ಸವಾಲನ್ನು ಒಡ್ಡುವಷ್ಟು ಪ್ರಾಬಲ್ಯತೆಯನ್ನು ಹೊಯ್ಸಳರು ಹಾಗೂ ಸೇವುಣರು ಪಡೆದುಕೊಂಡಿದ್ದರು. ಕ್ರಿ.ಶ.೧೧೮೬ರ ವೇಳೆಗೆ, ಈತನ ರಾಜಧಾನಿಯೆಂದು ವಿವರಿಸಲಾದ ವೈಜಯಂತಿಪುರಕ್ಕೆ ಆತನನ್ನು ಓಡಿಸಿದರು. ಕ್ರಿ.ಶ.೧೧೮೮ರಲ್ಲಿ, ಗುಲ್ಬರ್ಗಾ ಜಿಲ್ಲೆಯ ಕುಪ್ಪದ ಬಳಿಯಲ್ಲಿ, ಐದನೆಯ ಸೇವುಣ ಭಿಲ್ಲಮನು ಸೋಮೇಶ್ವರನ ವಿರುದ್ಧ ಹೋರಾಡಿದನು.

ನಾಲ್ಕನೆಯ ಸೋಮೇಶ್ವರನು ಜಯಶಾಲಿಯಾದರೂ, ಅದರ ಆನಂದವು ಅಲ್ಪಕಾಲ ಮಾತ್ರ ಉಳಿಯಿತು.ಇಮ್ಮಡಿ ಹೊಯ್ಸಳ ಬಲ್ಲಾಳನು ಚಾಳುಕ್ಯ ಸೇನಾಧಿಪತಿಯಾದ ಬ್ರಹ್ಮನನ್ನು ಸೋಲಿಸಿ, ತನ್ನ ಧ್ವಜವನ್ನು ಕಲ್ಯಾಣದ ಕೋಟೆಯ ಮೇಲೆ ಹಾರಿಸಿದನು.ಶೀಘ್ರವಾಗಿ, ಸೇವುಣ ರಾಜನಾದ ಭಿಲ್ಲಮ ಮತ್ತು ಹೊಯ್ಸಳರ ನಡುವೆ ಭೀಕರ ಯುದ್ಧ ನಡೆದು, ಭಿಲ್ಲಮನು ಜಯಶಾಲಿಯಾದನು.ಈ ಯುದ್ಧದ ನಂತರ, ಭಿಲ್ಲಮನು ಕಲ್ಯಾಣಲಕ್ಷ್ಮಿಯನ್ನು ಪಡೆದುಕೊಂಡನೆಂದು ಹೇಳಲಾಗುತ್ತದೆ. ಹಾಗಾಗಿ, ಮೊದಲು ಭಿಲ್ಲಮನಿಂದ ನಂತರ ಬಲ್ಲಾಳನಿಂದ ನಾಲ್ವಡಿ ಸೋಮೇಶ್ವರನು ತನ್ನ ರಾಜ್ಯಾಧಿಕಾರದಿಂದ ವಂಚಿತನಾದನು.ಶಾಸನಗಳು ತಿಳಿಸುವಂತೆ, ಕ್ರಿ.ಶ.೧೧೯೮ರವರೆಗೂ ನಾಲ್ವಡಿ ಸೋಮೇಶ್ವರನು ಜೀವಿಸಿದರೂ, ಆತನು ಚಾಳುಕ್ಯ ಸಾಮ್ರಾಟನಾಗಿ ಉಳಿಯಲಿಲ್ಲ.ಹಾಗಾಗಿ, ಚಾಳುಕ್ಯರು ಸಾರ್ವಭೌಮತ್ವದಿಂದ ನೇಪಥ್ಯಕ್ಕೆ ಸರಿದರು.

ಕಲ್ಯಾಣದ ಚಾಳುಕ್ಯರು ಸಾಕಷ್ಟು ದೀರ್ಘಾವಧಿ ಕರ್ನಾಟಕದಲ್ಲಿ ಆಳಿದರು.ದಕ್ಷಿಣ ಭಾರತದ ಚಕ್ರಾಧಿಪತ್ಯದ ಮೇಲೆ, ದೀರ್ಘ ಕಾಲದವರೆಗೂ ಸಾರ್ವಭೌಮತ್ವವನ್ನು ಸ್ಥಾಪನೆ ಮಾಡುವಲ್ಲಿ ಯಶಸ್ವಿಯಾಗಿದ್ದು, ಸಾಂಸ್ಕೃತಿಕ ಅಭಿವೃದ್ಧಿಗೂ ಇವರ ಕೊಡುಗೆ ಅಪಾರವಾದುದು.ಆಡಳಿತದಲ್ಲಿ ಜನರು ಸಂತೋಷದಿಂದಿದ್ದು ದೇಶವು ಸಮೃದ್ಧಿಯಾಗಿರಲು ವಿನೂತನ ತತ್ವಗಳನ್ನು ರೂಪಿಸಿದರು. ವ್ಯಾಪಾರಿ ವೃತ್ತಿ ಸಂಘ  ಹಾಗೂ ಅಗ್ರಹಾರಗಳಲ್ಲಿನ ಮಹಾಜನರ ಕೂಟವು, ಅಂದಿನ ಕಾಲದ ಸಮೃದ್ಧಿ ಹಾಗೂ ಸ್ಥಳೀಯ ಸ್ವಾಯತ್ತತೆಯ  ಇಣುಕುನೋಟವನ್ನು ನೀಡುತ್ತದೆ.ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯದ ಕೆಲವು ದಿಗ್ಗಜರು ಈ ಕಾಲದಲ್ಲಿ ವೃದ್ಧಿಯಾದರು.ಇದೇ ಅವಧಿಯಲ್ಲಿ, ಬಸವಣ್ಣನವರ ಮುಂದಾಳತ್ವದಲ್ಲಿ ಹೊಸ ಸಾಮಾಜಿಕ ಹಾಗೂ ಧಾರ್ಮಿಕ ಚಳವಳಿಗೆ ನಾಂದಿ ಹಾಡಲಾಯಿತು. ಇದು ಮಹಾನ್ ಸಾಮಾಜಿಕ ಪರಿವರ್ತನೆಯ ಅಲೆಯನ್ನೆಬ್ಬಿಸಿ ಕನ್ನಡದಲ್ಲಿ ವಚನ ಸಾಹಿತ್ಯದ ಬೆಳವಣಿಗೆಯನ್ನು ತಂದಿತು. ತಮ್ಮ ಪ್ರದೇಶದೆಲ್ಲೆಡೆ ಚಾಳುಕ್ಯರು ಅನೇಕ ಸುಂದರ ದೇವಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹವನ್ನು ನೀಡಿದರು. ಕಲ್ಯಾಣ ಚಾಳುಕ್ಯರ ಆಶ್ರಯದಲ್ಲಿ, ಗದಗ, ಬೆಳಗಾವಿ, ಇಟಗಿ, ಕುಕ್ಕನೂರು, ಕುರುವಟ್ಟಿ, ಲಕ್ಕುಂಡಿ, ಹರಿಹರ, ಡಂಬಳ, ಚೌಡದಾನಪುರ ಹಾಗೂ ಮುಂತಾದ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸಲಾಯಿತು.ಚಾಳುಕ್ಯರ ಭವ್ಯತೆಗೆ ಸಾಕ್ಷಿಯಾಗಿ ಈ ದೇವಾಲಯಗಳು ಇಂದಿಗೂ ನಿಂತಿವೆ.

## ದೇವಗಿರಿಯ ಸೇವುಣರು

ಯಾದವರೆಂದೂ ಕರೆಯಲ್ಪಟ್ಟ ದೇವಗಿರಿಯ ಸೇವುಣರು ಹೊಯ್ಸಳರು ಆಳುತ್ತಿದ್ದ ಸಮಯದಲ್ಲೇ, ಕರ್ನಾಟಕದ ಉತ್ತರ ಭಾಗಗಳನ್ನು ಆಳಿದರು.ಸೇವುಣ ಎಂಬುದು ರಾಜಮನೆತನದ ಹೆಸರಾದರೂ, ಅವರನ್ನು ಯಾದವ ರಾಜವಂಶವೆಂದು ಉಲ್ಲೇಖಿಸಲಾಗಿದೆ.ಸೇವುಣ ಎಂಬ ಪದವನ್ನು ಸೆಉಣ, ಸೆಗುಣ, ಸೆಮುನ, ಮುಂತಾಗಿಯೂ ಬರೆಯಲಾಗುತ್ತದೆ.ಈ ಪದದ ನಿರ್ದಿಷ್ಟ ಅರ್ಥವು ತಿಳಿದು ಬರುವುದಿಲ್ಲ, ಆದರೆ ಈ ರಾಜವಂಶದ ಚರಿತ್ರೆಯ ಪ್ರಮುಖ ಮೂಲಗಳಲ್ಲಿ

ಒಂದಾದ ಹೇಮಾದ್ರಿಯ 'ಚತುರ್ವರ್ಗ ಚಿಂತಾಮಣಿ'ಯಲ್ಲಿ ಈ ಕುಟುಂಬದ ಪ್ರಾರಂಭಿಕ ರಾಜರಲ್ಲಿ ಒಬ್ಬನಾದ ಸೇವುಣಚಂದ್ರನಿಂದ ರಾಜವಂಶದ ಹೆಸರು ಬಂದಿತೆಂದು ಹೇಳಲಾಗಿದೆ. ತಮ್ಮ ಶಾಸನಗಳಲ್ಲಿ ಸೇವುಣರಿಗೆ ಪೌರಾಣಿಕ ಮೂಲವನ್ನು ನೀಡಲಾಗಿದ್ದು, ಕೃಷ್ಣನು ಜನಿಸಿದ ಯದುವಂಶಕ್ಕೆ ಸೇರಿದವರೆಂದೂ, ಮಥುರಾ ಅಥವಾ ದ್ವಾರಾವತಿಯಿಂದ ಡೆಕ್ಕನ್ ಪ್ರಾಂತಕ್ಕೆ ವಲಸೆ ಬಂದರೆಂದು ಹೇಳಲಾಗಿದೆ. ಈ ರಾಜವಂಶದ ಅರಸರ ದಡಿಯಪ್ಪ, ಭಿಲ್ಲಮ, ಸಿಂಘನ ಹಾಗೂ ರಜುಗಿ ಎಂಬ ಹೆಸರುಗಳು ಕರ್ನಾಟಕದಲ್ಲಿ ಕನ್ನಡ ಮೂಲವನ್ನು ಹೊಂದಿದೆ. ಅವರ ರಾಣಿಯರಾದ ವೊಡ್ಡಿಯವ್ವ ಹಾಗೂ ಇತರರ ಹೆಸರುಗಳೂ ಕನ್ನಡ ಪದಗಳಲ್ಲಿ ಕೊನೆಗೊಳ್ಳುವ ಹೆಸರುಗಳಾಗಿದ್ದವು. ಸೇವುಣರು ತಮ್ಮ ರಾಜ್ಯದಲ್ಲಿ ಅಧಿಕಾರಿಗಳಾಗಿ ಕನ್ನಡಿಗರನ್ನು ನೇಮಕ ಮಾಡಿದ್ದರು. ಅವರ ಬಹುತೇಕ ಶಾಸನಗಳು ಕನ್ನಡ ಭಾಷೆ ಹಾಗೂ ಲಿಪಿಯಲ್ಲಿದ್ದು, ಪ್ರಾರಂಭಿಕ ನಾಣ್ಯಗಳೂ ಕನ್ನಡದ ಬರವಣಿಗೆಯನ್ನು ಹೊಂದಿದ್ದವು.ಅರಸರು ಕನ್ನಡದ ಬಿರುದುಗಳನ್ನು ಅಳವಡಿಸಿಕೊಂಡು, ತಮ್ಮನ್ನು ತಾವು ಕರ್ನಾಟಕದ ಅಧಿಪತಿಗಳೆಂದು ಕರೆದುಕೊಂಡರು.ಈ ಎಲ್ಲ ಅಂಶಗಳೂ ಉತ್ತರ ಕರ್ನಾಟಕದಲ್ಲಿ ಕನ್ನಡಿಗರು ಸೇವುಣ ರಾಜ್ಯಕ್ಕೆ ಬೆಂಬಲ ನೀಡುತ್ತಿದ್ದರೆಂಬುದನ್ನು ಸೂಚಿಸುತ್ತದೆ.

ಕರ್ನಾಟಕ ಮಾತ್ರವಲ್ಲದೆ, ಸಂಪೂರ್ಣ ಡೆಕ್ಕನ್ ಪ್ರಾಂತದ ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನಕ್ಕೆ ಸೇವುಣರ ಕೊಡುಗೆಯು ಅಪಾರವಾದುದು. ಧರ್ಮ, ಸಾಹಿತ್ಯ, ಸಂಗೀತ ಹಾಗೂ ವಾಸ್ತು ನಿರ್ಮಾಣಕ್ಕೆ ಅವರು ಆಶ್ರಯವನ್ನು ನೀಡಿದರು. ಧರ್ಮ ಹಾಗೂ ಕಲಾ ಕ್ಷೇತ್ರಗಳಲ್ಲಿ, ಸೇವುಣರ ಸಾಧನೆಗಳು ಗಮನಿಸುವಂತಹವು. ಈ ಅವಧಿಯಲ್ಲಿ, ಮಹಾನುಭಾವ ಆಂದೋಳನವೆಂಬ ವಿನೂತನ ಧಾರ್ಮಿಕ ಚಳವಳಿಯು ಮೂಡಿಬಂತು. ಅಂದರೆ, 'ಮಹತ್ತಾದ ಅನುಭವ ಹೊಂದಿದ ಪುರುಷರು' ಎಂದರ್ಥ. ಈ ಮತದ ಸ್ಥಾಪಕನು ಚಕ್ರಧರ ಎಂಬಾತ. ಮಹಿಮಭಟ್ಟನು ಬರೆದ ಪುಸ್ತಕ 'ಲೀಲಾಚರಿತ'ದಲ್ಲಿ ಆತನ ಜೀವನ ಚರಿತ್ರೆಯ ವಿವರಣೆ ಇದೆ. ಕೃಷ್ಣನನ್ನು ಬಿಟ್ಟು, ಬೇರೆ ಯಾವ ದೇವರನ್ನೂ ಮಹಾನುಭಾವರು ನಂಬಲಿಲ್ಲ. ಜನರ ಧಾರ್ಮಿಕ ಜೀವನದ ಮೇಲೆ ಬಹುತೇಕವಾಗಿ ಪ್ರಭಾವ ಬೀರಿದ ಆತನೇ ಅವರ ಪರಮೋಚ್ಛ ದೈವ. ಈ ಅವಧಿಯಲ್ಲಿ ಮರಾಠಿ ಸಾಹಿತ್ಯವು ಅಭಿವೃದ್ಧಿ ಹೊಂದಿತು.


ವಿಠ್ಠಲ ಹಾಗೂ ಜ್ಞಾನದೇವರ ಪಂಥಗಳು ಸೇವುಣರ ಅಡಿಯಲ್ಲಿ ಇದ್ದ ಧಾರ್ಮಿಕ ಜೀವನದ ಮತ್ತೊಂದು ಪ್ರಮುಖ ಅಂಶವಾಗಿದೆ. ಈ ಅವಧಿಯಲ್ಲಿ ಪಂಢರಾಪುರದ ವಿಠ್ಠಲನು ಅತ್ಯಂತ ಜನಪ್ರಿಯ ದೇವರಾದನು. ಜ್ಞಾನದೇವನು ಈ ಪಂಥದ ಮುಖ್ಯಪ್ರವರ್ತನಾಚಾರ್ಯ ಹಾಗೂ ವಕ್ತಾರ ನಾದನು. ಆತನು ವೈಷ್ಣವ ಗುಂಪೊಂದನ್ನು ರೂಪಿಸಿದ್ದು, ಅದರ ಸದಸ್ಯತ್ವವು ಎಲ್ಲರಿಗೂ ಮುಕ್ತವಾಗಿತ್ತು. ಮರಾಠಿಯಲ್ಲಿ 'ಜ್ಞಾನೇಶ್ವರಿ', 'ಭಗವದ್ಗೀತದ ಭಾಷ್ಯ' ಹಾಗೂ 'ಅಭಂಗ್ಗ'ಳೆಂಬ ಭಕ್ತಿ ಕಾವ್ಯಗಳನ್ನು ಬರೆದನು.ಈ ಅವಧಿಯ ಮತ್ತೊಬ್ಬ ಸಂತನಾದ ನಾಮದೇವನು ಭಕ್ತಿ–ಚಿಂತನೆಗಳ ಮಹಾನ್ ಪ್ರತಿಪಾದಕನಾಗಿದ್ದು, ಅವನ ವಿಚಾರಗಳು ಜನಸಾಮಾನ್ಯರ ಮೇಲೆ ಸಾಕಷ್ಟು ಪ್ರಭಾವಬೀರಿದೆ.

ಕಲಾ ಕ್ಷೇತ್ರದಲ್ಲಿ, ಹೇಮಡ್ಪಂಥ್ ಶೈಲಿ ಎಂಬ ಕಟ್ಟಡ ನಿರ್ಮಾಣದ ಹೊಸ ಶೈಲಿಯೊಂದು ಅತ್ಯಂತ ಜನಪ್ರಿಯವಾಯಿತು.ಸೇವುಣ ರಾಜರ ಅಡಿಯಲ್ಲಿ ಮಂತ್ರಿಯಾಗಿದ್ದ ಹೇಮಾದ್ರಿಯೆಂಬ ಮಂತ್ರಿಗೆ ಈ ಶೈಲಿಯ ದೇವಾಲಯ ನಿರ್ಮಾಣದ ಪರಿಚಯಕ್ಕೆ ಸಾಂಪ್ರದಾಯಿಕವಾಗಿ ಶ್ರೇಯವು ಸಲ್ಲುತ್ತದೆ. ಆದರೆ, ಹೇಮಾದ್ರಿಯ ಕಾಲಕ್ಕೂ ಮುನ್ನ ಈ ಶೈಲಿಯ ಅನೇಕ ದೇವಾಲಯಗಳಿದ್ದು, ಬಹುಶಃ ಈ ಶೈಲಿಯನ್ನು ಆತನು ಜನಪ್ರಿಯಗೊಳಿಸಿದ ಕಾರಣದಿಂದ, ಅದು ಆತನ ಹೆಸರನ್ನು ಹೊತ್ತಿರುವಂತೆ ತೋರುತ್ತದೆ. ಕೆಲವು ವೈಷ್ಣವ ಸಂತರೂ ರಾಜ್ಯದಲ್ಲಿ ಪ್ರವರ್ಧಮಾನಕ್ಕೆ ಬಂದರು. ಈ ರೀತಿಯಲ್ಲಿ, ಸೇವುಣರು ಸಂಸ್ಕೃತಿಗೆ ಸೇವೆ ಸಲ್ಲಿಸಿ, ಕರ್ನಾಟಕದ ಚರಿತ್ರೆಯಲ್ಲಿ ಹೆಸರು ಗಳಿಸಿದರು.

## ಹೊಯ್ಸಳರು

ಗಂಗವಾಡಿಯನ್ನು ತಮ್ಮ ಅಧೀನದಲ್ಲಿ ಇರಿಸಿಕೊಂಡಿದ್ದ ತಲಕಾಡಿನ ಗಂಗರು, ಕಲ್ಯಾಣದ ಚಾಳುಕ್ಯರ ಬರುವಿಕೆಯಿಂದ ತಮ್ಮ ಬಲವನ್ನು ಕಳೆದುಕೊಂಡರು. ಚೋಳರು ಗಂಗವಾಡಿಯ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡರು. ಚಂಗಾಳ್ವರು ಹಾಗೂ ಕೊಂಗಾಳ್ವ ಸಾಮಂತ ರಾಜವಂಶಗಳು, ಚೋಳರ ಸರ್ವಾಧಿಪತ್ಯವನ್ನು ಅಂಗೀಕರಿಸಿದ್ದರು. ಉತ್ತರ–ಪೂರ್ವ ಪ್ರಾಂತದಲ್ಲಿ, ನೊಳಂಬರು ಬಲಿಷ್ಠ ಸಾಮಂತರಾದರು.ಚೋಳರಿಗೂ, ಚಾಳುಕ್ಯರಿಗೂ ಆಗಾಗ ಯುದ್ಧವು ನಡೆಯುತ್ತಿತ್ತು.ಈ ಪರಿಸ್ಥಿತಿಗಳಲ್ಲಿ, ಹೊಸ ರಾಜ ವಂಶವೊಂದು ಬಾನಂಚಿನಲ್ಲಿ ಮೂಡಿತು. ಅದೇ ಹೊಯ್ಸಳ ರಾಜವಂಶ. ಈ ವಂಶದವರು ತಮ್ಮನ್ನು ಯಾದವನಾರಾಯಣ ಹಾಗೂ ದ್ವಾರಾವತಿಪುರದ ದೊರೆಗಳೆಂದು ಕರೆದುಕೊಂಡರು.





ಚಿಕ್ಕಮಗಳೂರಿನ ಅಂಗಡಿ ಬಳಿಯ ಶಶಾಕಪುರ (ಸೊಸೆವೂರು) ಹೊಯ್ಸಳರ ಮೂಲಸ್ಥಾನ.ಇವರ ಕುಟುಂಬದ ಸಂಸ್ಥಾಪಕನನ್ನು 'ಸಳ' ಎಂದು ಗುರುತಿಸಲಾಗಿದೆ.ಹೊಯ್ಸಳ ಎಂಬುದು ಕುಟುಂಬದ ಹೆಸರು. ಇದರ ಹಿನ್ನೆಲೆಯಲ್ಲಿ ಒಂದು ಕಥೆ ಇದೆ. ವಾಸಂತಿಕಾದೇವಿಯ ದೇವಾಲಯದ ಆವರಣದಲ್ಲಿ ಹುಲಿಯೊಂದು ಮೇಲೆರಗಿ ನುಗ್ಗಿದಾಗ, ಆಶ್ರಮದ ಜೈನಮುನಿಯ ಆದೇಶದ ಮೇರೆಗೆ ಆತನ ಶಿಷ್ಯನಾದ ಸಳನು ಆ ಹುಲಿಯನ್ನು ಕೊಂದನು, ಹಾಗಾಗಿ, ಅವನಿಗೆ ಹೊಯ್(ಪೊಯ್)ಸಳನೆಂಬ ಹೆಸರನ್ನು ನಿಯುಕ್ತಗೊಳಿಸಲಾಯಿತೆಂದು ಹೇಳಲಾಗುತ್ತದೆ.ಈ ಘಟನೆಯನ್ನು ೧೨ನೆಯ ಶತಮಾನದ ಶಾಸನಗಳೂ ದಾಖಲಿಸಿರುವುದರಿಂದ, ಹೊಯ್ಸಳ ವಂಶಾವಳಿಯೊಂದಿಗೆ ಬೆಸೆದ ಕಥೆಯನ್ನು ಜನಸಾಮಾನ್ಯರು ಅಂಗೀಕರಿಸಿದುದಲ್ಲದೆ, ಅದು ಜನಪ್ರಿಯತೆಯನ್ನೂ ಪಡೆದಿತ್ತು.

೧೧ನೆಯ ಶತಮಾನದ ಪ್ರಾರಂಭದಿಂದ, ಹೊಯ್ಸಳರು ಪ್ರವರ್ಧಮಾನಕ್ಕೆ ಬಂದರು.ಸುಮಾರು ಕ್ರಿ.ಶ.೯೫೦ರ ಕಲಿಯೂರು ಶಾಸನದಲ್ಲಿ, ಚೋಳ ಸೇನಾಧಿಪತಿಯಾದ ಅಪ್ರಮೇಯನ ವಿರುದ್ಧ ಹೋರಾಡಿದ ಗಂಗರ ಮೈತ್ರಿಕೂಟದಲ್ಲಿ, ಹೊಯ್ಸಳ ಮುಖ್ಯಸ್ಥನೊಬ್ಬನನ್ನು ಹೆಸರಿಸಲಾಗಿದೆ ಹಾಗೂ ನೃಪಕಾಮನೆಂದು ಗುರುತಿಸಲಾದ ಈ ಮುಖ್ಯಸ್ಥನನ್ನು ಹೊಯ್ಸಳ ವಂಶಕ್ಕೆ ಸೇರಿದ ಮೊದಲನೇ ಅರಸನೆಂದು ನಂಬಲಾಗಿದೆ.

ಆತನ ಮಗನೂ, ಉತ್ತರಾಧಿಕಾರಿಯೂ ಆದ ವಿನಯಾದಿತ್ಯನ ಉಲ್ಲೇಖವು ಕ್ರಿ.ಶ.೧೦೪೭ರ ದಾಖಲೆಯೊಂದರಲ್ಲಿ ದೊರೆಯುತ್ತದೆ.ಗಂಗವಾಡಿಯ ಪ್ರಮುಖ ಭಾಗಗಳು ಆತನ ಅಧಿಪತ್ಯಕ್ಕೆ ಬಂದಿತ್ತು. ಆತನು ಚಾಳುಕ್ಯರೊಂದಿಗೆ ಗುರುತಿಸಿಕೊಂಡಿದ್ದು ಮೊದಲನೆಯ ಚಾಳುಕ್ಯ ಸೋಮೇಶ್ವರನು ಆತನಿಗೆ ಸಹಾಯ ಹಸ್ತ ನೀಡಿದನು.ಪರಮಾರರೊಡನೆ ನಡೆದ ಯುದ್ಧದಲ್ಲಿ ಇಮ್ಮಡಿ ಸೋಮೆಶ್ವರನಿಗೆ ನೆರವು ನೀಡಲು ವಿನಯಾದಿತ್ಯನು ತನ್ನ ಮಗನಾದ ಎರೆಯಂಗನನ್ನು ನಿಯೋಜಿಸಿದನು. ಶತ್ರುವನ್ನು ಹಿಂದಕ್ಕೆ ತಳ್ಳುವುದರಲ್ಲಿ ತನ್ನ ಸ್ವಾಮಿಗೆ ನೆರವು ನೀಡುವುದಲ್ಲದೆ, ಆ ಶತ್ರುವನ್ನು ಆತನ ರಾಜಧಾನಿಯವರೆಗೂ ಹಿಮ್ಮೆಟ್ಟಿಸಿಕೊಂಡು ಹೋದನು.

ಮಲೆಪರು, ಚೋಳರು, ಮಾಳ್ವ, ಕಳಿಂಗ ಹಾಗೂ ವೆಂಗಿಯ ಅರಸರ ಮೇಲೆ ನಡೆಸಿದ ದಂಡಯಾತ್ರೆಗಳಲ್ಲಿ, ಧಾರ ಹಾಗೂ ಬಾಲಯವಟ್ಟಣದ ಭದ್ರಕೋಟೆಗಳು ಹಾಗೂ ಮಧ್ಯಪ್ರದೇಶದ ಬಸ್ತರ್ ಜಿಲ್ಲೆಯ ಅತ್ಯಂತ ಉತ್ಕೃಷ್ಟ ಚಕ್ರಕೂಟದ ದಾಳಿಗಳಲ್ಲಿ ಎರೆಯಂಗನು ವಹಿಸಿದ ಪಾತ್ರವನ್ನು ಶಿಲಾಶಾಸನಗಳು ಹೊಗಳುತ್ತವೆ. ಕೆಲವು ಯುದ್ಧಗಳಲ್ಲಿ, ಎರೆಯಂಗನು ತನ್ನ ಮಗನಾದ ವಿಷ್ಣುವರ್ಧನನು ಭಾಗವಹಿಸುವಂತೆ ಮಾಡಿ, ಆ ಮೂಲಕ ಯುದ್ಧಕೌಶಲ್ಯ ಕಲೆಯ ಪರಿಚಯ ಮಾಡಿದನು. ವಿನಯಾದಿತ್ಯನು ವೇಲಾಪುರವನ್ನು (ಬೇಲೂರು, ಹಾಸನ ಜಿಲ್ಲೆ) ತನ್ನ ರಾಜಧಾನಿಯಾಗಿ ಆರಿಸಿಕೊಂಡು, ತನ್ನ ಸ್ಥಾನವನ್ನು ಸುಭದ್ರಪಡಿಸಿಕೊಂಡನು. ಕ್ರಿ.ಶ.೧೦೪೫–೯೫ರವರೆಗೂ, ಅಂದರೆ ಐದು ದಶಕಗಳಿಗೂ ಹೆಚ್ಚುಕಾಲ ಇವನ ಆಳ್ವಿಕೆ ನಡೆಸಿದನು. ಇವನಿಗೆ ಒಂದನೆಯ ಬಲ್ಲಾಳ, ವಿಷ್ಣುವರ್ಧನ ಹಾಗೂ ಉದಯಾದಿತ್ಯರೆಂಬ ಮೂರು ಗಂಡುಮಕ್ಕಳು ಏಚಲಾದೇವಿ ಹಾಗೂ ಮಾಧವದೇವಿಯರೆಂಬ ಇಬ್ಬರು ರಾಜಕುವರಿಯರಿದ್ದರು.

ತನ್ನ ಸ್ವಕ್ಷೇತ್ರವಾದ ಹಾಸನ, ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲೆಗಳನ್ನೂ ಒಳಗೊಂಡಂತೆ, ವಿಸ್ತೃತವಾದ ರಾಜ್ಯದ ಅಧಿಪತಿಯಾಗಿದ್ದ ತನ್ನ ತಂದೆ ಎರೆಗಂಗನ ನಂತರ ರಾಜ್ಯಭಾರ ಸ್ವೀಕರಿಸಿದ ಒಂದನೆಯ ಬಲ್ಲಾಳನು, ಇದಕ್ಕೆ ಕೊಂಕಣ ಹಾಗೂ ಸಾವಿಮಲೆ ಪ್ರದೇಶಗಳನ್ನೂ (ಸಂಡೂರು ಪ್ರದೇಶ, ಬಳ್ಳಾರಿ ಜಿಲ್ಲೆ) ಸೇರ್ಪಡೆ ಮಾಡಿಕೊಂಡನು.ಅದು ವಿಶಾಲವಾದ ಪ್ರದೇಶವಾಗಿತ್ತು, ಆದರೆ ಬಲ್ಲಾಳನ ಪೂರ್ವಜರು, ಅವರನ್ನು ಸಾಮಂತರಾಗಿ ಅಧೀನಪಡಿಸಿಕೊಂಡಿದ್ದರು.ಬಲ್ಲಾಳನು ಈಗ ಸ್ವತಂತ್ರ ಅರಸನಾಗುವ ಯೋಚನೆಯನ್ನು ಮಾಡಿದನು.ಆರನೆಯ ಚಾಲುಕ್ಯ ವಿಕ್ರಮಾದಿತ್ಯನು ಆತನ ಚಕ್ರಾಧಿಪತಿಯಾಗಿದ್ದನು.ರಾಜಕುಮಾರನಾಗಿ ಅಸಂಖ್ಯಾತ ಯುದ್ಧಗಳಲ್ಲಿ ಹೋರಾಡಿದ್ದ ಅವನು, ಸಿಂಹಾಸನವನ್ನು ಏರಿದೊಡನೆ ತನ್ನ ಸ್ವಂತ ಸ್ಥಾನವನ್ನು ಸುಭದ್ರಗೊಳಿಸಿಕೊಂಡನು. ಸ್ವಾತಂತ್ರ್ಯವನ್ನು ಘೋಷಿಸಿಕೊಳ್ಳುವ ಬಲ್ಲಾಳನ ಯತ್ನಗಳನ್ನು ಗಮನಿಸುತ್ತಿದ್ದ ವಿಕ್ರಮಾದಿತ್ಯನು ತನ್ನಲ್ಲಿ ಆಶ್ರಯ ಪಡೆದಿದ್ದ ಪರಮಾರ ರಾಜಕುಮಾರನಾದ ಜಗ್ಗದೇವನನ್ನು, ಈ ಹೊಸ ದಂಗೆಯನ್ನು ಹತ್ತಿಕ್ಕಲು ಕಳುಹಿಸಿದನು.ಆದರೆ, ತನ್ನ ಸಹೋದರರಾದ ವಿಷ್ಣುವರ್ಧನ ಹಾಗೂ ಉದಯಾದಿತ್ಯರ ಸಮರ್ಥ ನೆರವನ್ನು ಹೊಂದಿದ್ದ ಬಲ್ಲಾಳನು ಕ್ರಿ.ಶ.೧೧೦೦ರಲ್ಲಿ ಜಗ್ಗದೇವನನ್ನು ಸೋಲಿಸಿ ಹಿಂದಕ್ಕೆ ಕಳುಹಿಸಿದನು.

ನಂತರ, ಕೊಡಗು ಹಾಗೂ ಮೈಸೂರು ಜಿಲ್ಲೆಯ ಭಾಗಗಳನ್ನು ಆಳುತ್ತಿದ್ದ ಚಂಗಾಳ್ವರು, ಬಲ್ಲಾಳನ ಸಾರ್ವಭೌಮತ್ವವನ್ನು ಬಲವಂತವಾಗಿ ಅಂಗೀಕರಿಸಬೇಕಾಯಿತು; ಇದಾದನಂತರ ಬಲ್ಲಾಳನು ಆಳ್ವಖೇಡವನ್ನು (ದಕ್ಷಿಣ ಕನ್ನಡ) ಆಕ್ರಮಿಸಿಕೊಂಡನು.ಈ ವೇಳೆಗೆ ಬಲ್ಲಾಳನು ತುಂಗಭದ್ರೆಯನ್ನು ತನ್ನ ರಾಜ್ಯದ ಗಡಿಯಾಗಿ ಮಾಡಿಕೊಂಡಿದ್ದನು. ಆದರೆ, ಆತನು ಮತ್ತಷ್ಟು ಮಹತ್ವಾಕಾಂಕ್ಷಿಯಾಗಿ, ಬೆಳ್ವೊಲವನ್ನು (ಧಾರವಾಡ ಪ್ರದೇಶ) ತನ್ನ ಅಧೀನಕ್ಕೆ ಪಡೆದುಕೊಳ್ಳಲು ಬಯಸಿದನು. ಆದರೆ, ನಂಬಿಕಸ್ಥ ದಣ್ಣಾಯಕನಾದ ಯೆರಂಬರಗಿಯ (ಯಲಬುರ್ಗಿ) ಆಚುಗಿಯನ್ನು ಹೊಯ್ಸಳರ ವಿರುದ್ಧ ಹೋರಾಡಲು ಕಳುಹಿಸಿದ ಆರನೆಯ ವಿಕ್ರಮಾಧಿತ್ಯನು ಅವರು ಸೋಲುವಂತೆ ಮಾಡಿದನು.ಈ ಮೂಲಕ, ಬಲ್ಲಾಳನ ಮಹತ್ವಾಕಾಂಕ್ಷೆಗೆ ಬರೆ ಎಳೆದಂತಾಗಿ, ತದನಂತರ, ಕ್ರಿ.ಶ.೧೧೦೮ರಲ್ಲಿ ತನ್ನ ಜೀವನದ ಅಂತ್ಯದವರೆಗೂ, ಸಾಮಂತನ ಸ್ಥಾನದಲ್ಲೇ ಇವನು ತೃಪ್ತಿ ಪಡಬೇಕಾಯಿತು. ಬಲ್ಲಾಳನಿಗೆ ಮೂವರು ಹೆಂಡತಿಯರಿದ್ದು ಅವರೆಲ್ಲರೂ, ಸೇನಾಧಿಪತಿಯಾದ ಮರಿಯಾನೆಯ ಅಕ್ಕ–ತಂಗಿಯರು. ಆತನಿಗೆ ಮಕ್ಕಳಿರಲಿಲ್ಲವಾಗಿ ನಾಯಕತ್ವವು ಆತನ ತಮ್ಮನಾದ ವಿಷ್ಣುವರ್ಧನನ ಪಾಲಾಯಿತು.


ಕೋಟೆ, ಬಸವಕಲ್ಯಾಣ, ಬೀದರ್ ಜಿಲ್ಲೆ



ಮಧುಕೇಶ್ವರ ದೇವಾಲಯ, ಬನವಾಸಿ, ಉತ್ತರಕನ್ನಡ ಜಿಲ್ಲೆ



ಬ್ರಹ್ಮ ಜಿನಾಲಯ, ಲಕ್ಕುಂಡಿ, ಗದಗ್ ಜಿಲ್ಲೆ



ಮಹಾದೇವ ದೇವಾಲಯ, ಇಟಗಿ, ಕೊಪ್ಪಳ ಜಿಲ್ಲೆ


***ಚನ್ನಕೇಶವ ದೇವಾಲಯ, ಬೇಲೂರು, ಹಾಸನ ಜಿಲ್ಲೆ***

ಚೋಳರಿಂದ ಸ್ವಾಧೀನಗೊಂಡಿದ್ದ ಗಂಗವಾಡಿಯತ್ತ ವಿಷ್ಣುವರ್ಧನನ ಗಮನವು ಮೊದಲು ಹರಿಯಿತು.ಚೋಳರನ್ನು ತಲಕಾಡಿನಿಂದ ಸುಲಭವಾಗಿ ಹೊಡೆದೋಡಿಸಿ ಅತ್ಯಲ್ಪ ಯತ್ನದಿಂದ ಕಂಚಿಯವರೆಗೂ ನಡೆದು, ಅದನ್ನು ಕೆಲಕಾಲ ಆಕ್ರಮಿಸಿಕೊಂಡಿದ್ದನು.ಪೂರ್ವದ ಗಂಗರ ಎರಡು ಭದ್ರ ಬುನಾದಿಗಳಾದ ಕೋಲಾರ ಹಾಗೂ ನಂಗಲಿಗಳನ್ನೂ ಗೆದ್ದನು.ಈ ರೀತಿಯಲ್ಲಿ, ಕ್ರಿ.ಶ.೧೧೧೬ರ ವೇಳೆಗೆ, ವಿಷ್ಣುವರ್ಧನನು ಗಂಗವಾಡಿಯನ್ನು ಸಂಪೂರ್ಣ ಆಕ್ರಮಿಸಿಕೊಂಡಿದ್ದನು.ಕ್ರಿ.ಶ.೧೧೫೨ರ ವೇಳೆಗೆ ನಾಲ್ಕು ದಶಕಗಳಿಗೂ ಹೆಚ್ಚಿನ ಅವಧಿಯವರೆಗೆ, ಅಂದರೆ ಕ್ರಿ.ಶ.೧೧೦೮–೫೨ರವರೆಗೆ ಆಳಿದ್ದ ವಿಷ್ಣುವರ್ಧನನಿಗೂ ಬಹಳಷ್ಟು ವಯಸ್ಸಾಗಿತ್ತು.ಆತನ ರಾಣಿಯರಾದ ಶಾಂತಲಾ, ಲಕ್ಷ್ಮೀದೇವಿ ಹಾಗೂ ಬಮ್ಮಲಾದೇವಿಯರೊಡನೆ ಸುಖಮಯ ವೈವಾಹಿಕ ಜೀವನವನ್ನು ನಡೆಸಿದ್ದನು.ಶಾಂತಲೆಯು ನಾಟ್ಯ ಕಲೆಗಳಲ್ಲಿ ನಿಪುಣಳೂ, ಕಟ್ಟಾ ಜೈನ ಶ್ರದ್ಧಾಳುವೂ, ವಿಶಾಲ ಮನೋಭಾವವನ್ನು ಹೊಂದಿದವಳೂ ಆಗಿದ್ದಳು.ಮೂಲತಃ ವಿಷ್ಣುವರ್ಧನನು ಜೈನನಾಗಿದ್ದರೂ, ವಿಶಿಷ್ಟಾದ್ವೈತದ ಪ್ರತಿಪಾದಕರಾದ ಸಂತ ರಾಮಾನುಜಾಚಾರ್ಯರಿಂದ ಶ್ರೀವೈಷ್ಣವ ಮತಕ್ಕೆ ಪರಿವರ್ತಿತನಾದನೆಂದು ಹೇಳಲಾಗುತ್ತದೆ. ಆದರೆ ಇದಕ್ಕೆ ಶಾಸನಾಧಾರಗಳ ಕೊರತೆ ಇದೆ.ಈ ಅವಧಿಯಲ್ಲಿ ವೈಷ್ಣವ ಮತಕ್ಕೆ ಪ್ರಬಲವಾದ ಬೆಂಬಲ ಹಾಗೂ ಪ್ರಚಾರವು ನಿಸ್ಸಂದೇಹಕವಾಗಿ ದೊರೆಯಿತು.ಈ ಅವಧಿಯಲ್ಲಿ ನಿರ್ಮಿಸಿದ ಬೇಲೂರಿನ ಚೆನ್ನಕೇಶವ ದೇವಾಲಯ ಹಾಗೂ ಹೊಯ್ಸಳ ರಾಜಧಾನಿಯಾದ ದ್ವಾರಸಮುದ್ರದಲ್ಲಿನ (ಹಳೇಬೀಡು) ಹೊಯ್ಸಳೇಶ್ವರ ದೇವಾಲಯಗಳು, ಹೊಯ್ಸಳ ಶೈಲಿಯ ಕಟ್ಟಡ ನಿರ್ಮಾಣಕ್ಕೆ ಕಳಶಪ್ರಾಯವಾಗಿವೆ. ರಾಜ್ಯದ ಶಾಂತಿ ಹಾಗೂ ಸಮೃದ್ಧಿಗೆ ಕೊಡುಗೆಯನ್ನು ನೀಡಿದ ಹಲವಾರು ನೀರಾವರಿ ಕೆರೆಗಳು ಹಾಗೂ ಇನ್ನೂ ಅನೇಕ ದೇವಾಲಯಗಳನ್ನು ಈ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು.

ಕ್ರಿ.ಶ.೧೧೪೩ರಲ್ಲಿ ವಿಷ್ಣುವರ್ಧನನ ಹಿರಿಯ ಮಗನಾದ ಬಲ್ಲಾಳನು ಅಕಾಲಿಕ ಮರಣವನ್ನು ಹೊಂದಿದನು; ಆದರೆ ಅದೇ ವರ್ಷದಲ್ಲಿ ಇವನಿಗೆ ಮತ್ತೊಬ್ಬ ಮಗ ನರಸಿಂಹನ ಜನನವಾಯಿತು. ಆತನ ಜನನದ ಸ್ವಲ್ಪ ಕಾಲದಲ್ಲೇ, ರಾಜಕುಮಾರನನ್ನು ಯುವರಾಜನೆಂದು ನಿಯುಕ್ತಗೊಳಿಸಲಾಯಿತು. ಒಂದನೆಯ ಆದರೆ ನರಸಿಂಹನು ತನ್ನ ತಂದೆಯ ಆಶೋತ್ತರಗಳನ್ನು ಈಡೇರಿಸಲು ಆಗಲಿಲ್ಲ. ನೊಳಂಬವಾಡಿ ಪ್ರಾಂತದ ಮೇಲಿದ್ದ, ಹೊಯ್ಸಳ ನಿಯಂತ್ರಣವು ಜಾರಿಹೋಯಿತು; ಆತನ ಸೇನಾಧಿಪತಿಯಾದ ಬೋಕಿಮಯ್ಯನ ಸಮಯೋಚಿತ ಕಾರ್ಯಾಚರಣೆ ಇಲ್ಲದಿದ್ದರೆ, ಹೊಯ್ಸಳ ಸಾರ್ವಭೌಮತ್ವದಿಂದ ಚಂಗಾಳ್ವರು ಹಾಗೂ ಕೊಂಗಾಳ್ವರು ಸ್ವತಂತ್ರರಾಗಿ ಬಿಡುತ್ತಿದ್ದರು. ಕಲ್ಯಾಣದಲ್ಲಿ ಕಲಚುರಿ ಬಿಜ್ಜಳನು ಅಧಿಕಾರಕ್ಕೆ ಬಂದ ಮೇಲೆ, ಬನವಾಸಿಯಿಂದ ಹೊಯ್ಸಳರನ್ನು ಬಲಪ್ರಯೋಗದಿಂದ ಹೊರದಬ್ಬಿದನು. ಈ ರೀತಿಯಲ್ಲಿ, ಕಷ್ಟ ಪಟ್ಟು ಗಳಿಸಿದ್ದ ಪ್ರದೇಶಗಳೆಲ್ಲವೂ, ತಮ್ಮ ಕೈಗಳಿಂದ ಮೆಲ್ಲನೆ ಜಾರಿದರೂ ರಾಜನು ಇದರಿಂದ ವಿಚಲಿತನಾಗಲಿಲ್ಲ. ಆದರೆ, ಕ್ರಿ.ಶ.೧೧೬೮ರಷ್ಟು ಮೊದಲೇ ರಾಜ–ನಿಯುಕ್ತನಾಗಿದ್ದರೂ ಆತನ ಮಗನಾದ ಎರಡನೆಯ ಬಲ್ಲಾಳನು ತಂದೆಯ ನಿಷ್ಕ್ರಿಯ ಧೋರಣೆಯಿಂದ ಅಸಮಾಧಾನಗೊಂಡು ದಂಗೆಯೆದ್ದು ಕ್ರಿ.ಶ.೧೧೭೩ರಲ್ಲಿ, ತನ್ನ ತಂದೆಯಿಂದ ಬಲವಂತವಾಗಿ ರಾಜ್ಯವನ್ನು ಕಸಿದುಕೊಂಡನು.


***ಮೂಲ ಚನ್ನಕೇಶವಮೂರ್ತಿ, ಬೇಲೂರು***

ಕ್ರಿ.ಶ.೧೧೭೩–೧೨೨೦ರವರೆಗೂ, ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲದವರೆಗೂ ಎರಡನೆಯ ಬಲ್ಲಾಳನು ಆಳಿದನು; ಈ ಅವಧಿಯನ್ನು ಹೊಯ್ಸಳರ ಚರಿತ್ರೆಯ ಅಮೋಘ



ಅಧ್ಯಾಯವೆಂದು ಗುರುತಿಸಲಾಗಿದೆ. ತನ್ನ ತಂದೆಯ ಕಾಲದಲ್ಲಿ ಕಂಡ ಹಿನ್ನಡೆಗಳನ್ನು ಕೊನೆಗಾಣಿಸಿದ್ದಲ್ಲದೆ, ರಾಜ್ಯವನ್ನು ಸ್ವತಂತ್ರವಾಗಿಸುವ ತಾತನ ಕನಸನ್ನು ನನಸಾಗಿಸಿದನು. ತುಂಗಭದ್ರಾ ಪ್ರದೇಶವು ಸೇವುಣ ಹಾಗೂ ಹೊಯ್ಸಳರ ನಡುವಣ ಯುದ್ಧಭೂಮಿಯಾಗಿ ಪರಿಣಮಿಸಿದ್ದು ಮೇಲುಗೈ ಸಾಧಿಸುವ ಮೂಲಕ ಆರ್ಥಿಕವಾಗಿ ಸುಭಿಕ್ಷವಾದ ಪ್ರದೇಶವನ್ನು ಪಡೆದುಕೊಳ್ಳುವ ಹೋರಾಟವಾಗಿತ್ತು.ಈ ಪೈಪೋಟಿಯು ಕ್ರಿ.ಶ.೧೧೯೦ರಲ್ಲಿ ಗದಗ್ ಬಳಿಯಿರುವ ಸೊರಟೂರಿನಲ್ಲಿ ಬಲ್ಲಾಳ ಹಾಗೂ ಐದನೆಯ ಸೇವುಣ ಭಿಲ್ಲಮರ ನಡುವೆ ನಡೆದ ಯುದ್ಧದಲ್ಲಿ ಇತ್ಯರ್ಥಗೊಂಡು ಕೊನೆಗೆ ಬಲ್ಲಾಳನೇ ವಿಜಯಶಾಲಿಯಾದನು.

ಬೆಳ್ವೊಲವನ್ನು ಆಕ್ರಮಿಸಿಕೊಂಡ ಮೇಲೆ, ರಾಯಚೂರು–ಬಳ್ಳಾರಿ ಪ್ರದೇಶದಲ್ಲಿರುವ ಕುಕ್ಕನೂರು ಹಾಗೂ ಮಾನ್ವಿಯ ಕೋಟೆಗಳನ್ನು ಪಡೆದುಕೊಳ್ಳಲು, ಬಲ್ಲಾಳನು ಕ್ರಮ ಕೈಗೊಂಡನು. ಕ್ರಿ.ಶ.೧೨೧೨ರವರೆಗೂ ಬೆಳ್ವೊಲದ ಮೇಲಿನ ನಿಯಂತ್ರಣವನ್ನು ಬಲ್ಲಾಳನು ಮುಂದುವರಿಸಿದರೂ, ನಂತರ ಸಿಂಘನನು ಮೇಲುಗೈ ಸಾಧಿಸಿ, ಹೊಯ್ಸಳರನ್ನು ತುಂಗಭದ್ರೆಯ ಕೆಳಪ್ರದೇಶಕ್ಕೆ ತಳ್ಳಿದನು. ಈ ಅವಧಿಯಲ್ಲಿ, ಸ್ವತಂತ್ರ ರಾಜ್ಯಗಳ ಆಳ್ವಿಕೆಯನ್ನು ಮಾಡುತ್ತಿದ್ದ ಇಬ್ಬರು ಪ್ರತಿಸ್ಪರ್ಧಿಗಳ ನಡುವೆ ತುಂಗಭದ್ರೆಯು ಸಾಮಾನ್ಯ ಗಡಿಯಾದಳು. ತನ್ನ ಅಂತಿಮ ವರ್ಷಗಳಲ್ಲಿ, ಬಲ್ಲಾಳನು ಚೋಳರ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಬೇಕಾಯಿತು, ಏಕೆಂದರೆ ಅವನ ಮಡದಿಯರಲ್ಲಿ ಒಬ್ಬಳಾದ ಚೋಳ ಮಹಾದೇವಿಯು ಆ ಕುಟುಂಬಕ್ಕೆ ಸೇರಿದವಳಾಗಿದ್ದಳು.ಈತನ ಮಗಳಾದ ಸೋಮಲಾದೇವಿಯು, ಪಾಂಡ್ಯ ಎದುರಾಳಿಯಾದ ಮಾರವರ್ಮ ಸುಂದರಪಾಂಡ್ಯನ್‌ನಿಂದ ಪದಚ್ಯುತನಾಗಿದ್ದ ಚೋಳ ರಾಜನಾದ ಮುಮ್ಮಡಿ ಕುಲೋತ್ತುಂಗನನ್ನು ವಿವಾಹವಾಗಿದ್ದು ರಾಜ್ಯವನ್ನು ಮರಳಿ ಪಡೆಯಲು ಬಲ್ಲಾಳನ ನೆರವನ್ನು ಕೋರಿದಳು. ಈ ಕಾರ್ಯವನ್ನು ಇಮ್ಮಡಿ ಬಲ್ಲಾಳನು ತನ್ನ ಮಗನಾದ ಇಮ್ಮಡಿ ನರಸಿಂಹವರ್ಮನಿಗೆ ವಹಿಸಿದನು; ನರಸಿಂಹವರ್ಮನು ಈ ಕಾರ್ಯದಲ್ಲಿ ಯಶಸ್ವಿಯಾದನು. ಇದು ಬಲ್ಲಾಳನಿಗೆ ಚೋಳರಾಜ್ಯ–ಪ್ರತಿಷ್ಠಾಚಾರ್ಯನೆಂಬ ಬಿರುದನ್ನು ತಂದುಕೊಟ್ಟಿತು.

ದಕ್ಷಿಣದ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದ ಇಮ್ಮಡಿ ನರಸಿಂಹನು, ಕ್ರಿ.ಶ.೧೨೨೦–೩೫ರವರೆಗೂ ರಾಜ್ಯವಾಳಿದನು. ಮುಮ್ಮಡಿ ಚೋಳ ರಾಜರಾಜನು ಮತ್ತಷ್ಟು ತೊಂದರೆಯಲ್ಲಿ ಸಿಲುಕಿಕೊಂಡನು. ಪಾಂಡ್ಯರ ಪರವಾಗಿ ಕ್ರಮ ಕೈಗೊಂಡ ಕಾಡವರಾಯ ಕೊಪ್ಪರುಂಜಿಂಗನಿಂದಾಗಿ ರಾಜರಾಜನು ರಾಜಧಾನಿಯಿಂದ ಬಲವಂತವಾಗಿ ಪಲಾಯನ ಮಾಡುವಂತಾಯಿತು.ಕ್ರಿ.ಶ.೧೨೨೨ರಲ್ಲಿ ಚೋಳ ದೇಶಕ್ಕೆ ಇಮ್ಮಡಿ ನರಸಿಂಹನು ನುಗ್ಗಿ, ಕಾಡವರು ಹಾಗೂ ಇತರ ಶತ್ರುಗಳನ್ನು ಸೋಲಿಸಿ, ರಾಜರಾಜನನ್ನು ಪುನಃಸ್ಥಾಪನೆ ಮಾಡಿದನು.ನರಸಿಂಹನು ಎಲ್ಲವನ್ನೂ ವ್ಯವಸ್ಥಿತಗೊಳಿಸಿ, ಕಣ್ಣನೂರಿನ ಉಸ್ತುವಾರಿಯನ್ನು ತನ್ನ ಮಗನಾದ ಸೋಮೇಶ್ವರನಿಗೆ ವಹಿಸಿದನು ಇದು ಹೊಯ್ಸಳರ ದ್ವಿತೀಯ ರಾಜಧಾನಿಯೂ ಆಯಿತು. ನಂತರ, ಸ್ವತಃ ನರಸಿಂಹನೇ ಮಾರವರ್ಮ ಸುಂದರ ಪಾಂಡ್ಯನ ವಿರುದ್ಧ ಸೆಣಸಿ ಆತನನ್ನು ಸದೆಬಡಿದನು. ಇದರೊಂದಿಗೆ ಕಣ್ಣನೂರಿನ ಸುತ್ತಲಿದ್ದ ಪ್ರದೇಶವು ಹೊಯ್ಸಳ ರಾಜ್ಯದ ಭಾಗವಾಯಿತು. ೧೫ ವರ್ಷಗಳ ನರಸಿಂಹನ ಆಳ್ವಿಕೆಯ ಕಾಲದಲ್ಲಿ, ದಕ್ಷಿಣದಲ್ಲಿ ಹೊಯ್ಸಳ ಸಾಮ್ರಾಜ್ಯವು ಮಹತ್ತರ ಬೆಳವಣಿಗೆಯನ್ನು ಕಂಡಿತು. ಉತ್ತರದಲ್ಲಿ, ತುಂಗಭದ್ರೆಯು ಗಡಿ ಆಗಿತ್ತು.

ಕ್ರಿ.ಶ.೧೨೩೫–೫೩ರವರೆಗೂ ಆಳಿದ ಸೋಮೇಶ್ವರನು ತನ್ನ ಯೌವನದ ದಿನಗಳಿಂದಲೂ ತಮಿಳು ದೇಶದೊಡನೆ ನಿಕಟ ಸಂಬಂಧವನ್ನು ಬೆಳೆಸಿಕೊಂಡಿದ್ದು, ಉತ್ತರದ ಪ್ರಾಂತಗಳಲ್ಲಿ ಅಷ್ಟಾಗಿ ಆಸಕ್ತಿ ಇರಲಿಲ್ಲ. ದೋರಸಮುದ್ರಕ್ಕಿಂತ, ಆತನು ಕಣ್ಣನೂರಿನಲ್ಲೇ ಇರಲು ಇಚ್ಛೆಸಿದನು.ಸೋಮೇಶ್ವರನು ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ, ತನ್ನ ಇಬ್ಬರು ಮಕ್ಕಳಾದ ಮುಮ್ಮಡಿ ನರಸಿಂಹ ಹಾಗೂ ರಾಮನಾಥರ ನಡುವಣ ಒಳಜಗಳವನ್ನು ಬಗೆಹರಿಸಬೇಕಾಯಿತು. ತನ್ನ ರಾಜ್ಯವನ್ನು ಎರಡಾಗಿ ವಿಭಜಿಸಿ, ಹಿರಿಯ ಮಗ ನರಸಿಂಹನಿಗೆ ಸಾಮ್ರಾಜ್ಯದ ರಾಜಧಾನಿಯಾದ ದೋರಸಮುದ್ರದ ಉತ್ತರ ಭಾಗದ ಉಸ್ತುವಾರಿಯನ್ನೂ ಹಾಗೂ ಕಣ್ಣನೂರು ರಾಜಧಾನಿಯಾದ ಸಾಮ್ರಾಜ್ಯದ ದಕ್ಷಿಣ ಭಾಗವನ್ನು ಕಿರಿಯ ಮಗನಾದ ರಾಮನಾಥನಿಗೂ ನೀಡಿದನು. ಸ್ವತಃ ಸೋಮೇಶ್ವರನೇ ತನ್ನ ಜೀವನದ ಅಂತ್ಯದವರೆಗೂ ಕಣ್ಣನೂರಿನಲ್ಲೇ ನೆಲೆಸಿದನು.

ಸಾಮ್ರಾಜ್ಯದ ವಿಭಜನೆಯಿಂದ, ಸಹೋದರರಿಬ್ಬರ ಸಂಬಂಧವು ಹದಗೆಟ್ಟು ಅವರ ನಡುವಣ ಕಂದಕವು ಹೆಚ್ಚಾಯಿತು.ಕ್ರಿ.ಶ.೧೨೬೧ರಲ್ಲಿ, ಸೇವುಣ ಮಾಧವ ಹಾಗೂ ಅವನ ನಂತರ ಬಂದ ರಾಮಚಂದ್ರನು ಕ್ರಿ.ಶ.೧೨೬೫ರಲ್ಲಿ, ಹೊಯ್ಸಳರ ವಿರುದ್ಧ ಧಾಳಿಗಳನ್ನು ನಡೆಸಿದಾಗ ಅತ್ಯಂತ ಪ್ರಯಾಸದಿಂದ ನರಸಿಂಹನು ಈ ಧಾಳಿಗಳನ್ನು ಹಿಮ್ಮೆಟ್ಟಿಸಿದನು. ಚಿತ್ರದುರ್ಗದ ಸುತ್ತಲಿನ ಪ್ರದೇಶವನ್ನು ಸೇವುಣರು ತಮ್ಮ ವಶಕ್ಕೆ ತೆಗೆದುಕೊಂಡರು.ಹೊಯ್ಸಳ ರಾಜ್ಯದ ದಕ್ಷಿಣ ಭಾಗದಲ್ಲಿ ರಾಮನಾಥನು ಯಶಸ್ವಿಯಾದಾಗ, ಹೊಯ್ಸಳ ಹಾಗೂ ಚೋಳರ ನಡುವಣ ಸಂಬಂಧವೂ ಹಳಸಿತು.ಮಾರವರ್ಮನ್ ಸುಂದರಪಾಂಡ್ಯನ ನಂತರ ಬಂದ ಮೊದಲನೆಯ ಜಟವರ್ಮ ಸುಂದರಪಾಂಡ್ಯನು, ದೊಡ್ಡ ಸೈನ್ಯದೊಡನೆ ಹೊಯ್ಸಳರ ವಿರುದ್ಧ ಹೊರಟನು. ಈ ಯುದ್ಧ ನಡೆದ ಕೊಂಚ ಕಾಲದ ನಂತರ, ಸೋಮೇಶ್ವರನು ಮಡಿದನು.ತನ್ನ ರಾಜ್ಯವನ್ನು ಕಳೆದುಕೊಂಡ ರಾಮನಾಥನು, ತನ್ನ ಸಹೋದರ ನರಸಿಂಹನ ವಿರುದ್ಧ ತನ್ನ ಶತ್ರುತ್ವವನ್ನು ತೀವ್ರಗೊಳಿಸಿ ಅದರಲ್ಲಿ ಸ್ವಲ್ಪ ಮಟ್ಟಿನ ಯಶಸ್ಸನ್ನೂ ಕಂಡು, ಕೋಲಾರ ಹಾಗೂ ಬೆಂಗಳೂರು ಜಿಲ್ಲೆಗಳ ಕೆಲ ಭಾಗಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಕಣ್ಣನೂರಿನ ಉತ್ತರಕ್ಕೆ ಇರುವ ಕುಂದಣಕ್ಕೆ ರಾಜಧಾನಿಯನ್ನು ಬಲವಂತವಾಗಿ ಸ್ಥಳಾಂತರಗೊಳಿಸಿಕೊಳ್ಳುವಂತೆ ಮಾಡಿ, ಕ್ರಿ.ಶ.೧೨೯೫ನಲ್ಲಿ ಆತನ ಮರಣದವರೆಗೂ, ಅಲ್ಲಿಂದಲೇ ತನ್ನ ರಾಜ್ಯಭಾರವನ್ನು ಮಾಡಿದನು.

ಕ್ರಿ.ಶ.೧೨೯೧ರ ವೇಳೆಗೆ ನರಸಿಂಹನ ಮರಣಾನಂತರ ಸಿಂಹಾಸನವನ್ನು ಏರಿದ್ದ ಮುಮ್ಮಡಿ ಬಲ್ಲಾಳನು  ರಾಮನಾಥನು ಕಾಲವಾದ ಮೇಲೆ,ಕಣ್ಣಾನೂರು ರಾಜ್ಯವು ತನ್ನ ಪಾಲಾಗುವುದೆಂದು ಎದುರುನೋಡಿದ್ದನು. ಆದರೆ ರಾಮನಾಥನು ಬಲ್ಲಾಳನ ಪಟ್ಟಾಭಿಷೇಕಕ್ಕೆ ವಿರೋಧ ವ್ಯಕ್ತಪಡಿಸಿದ್ದರಿಂದ ಕ್ರಿ.ಶ.೧೨೯೨ರ ಜನವರಿಯವರೆಗೂ, ಪಟ್ಟಾಭಿಷೇಕವನ್ನು ಮುಂದೂಡಬೇಕಾಯಿತು. ಏತನ್ಮಧ್ಯೆ, ಬಲ್ಲಾಳನು ಚಾಣಾಕ್ಷತೆಯಿಂದ ಅವನನ್ನು ಸದೆಬಡಿಯುವುದರೊಂದಿಗೆ  ಕ್ರಿ.ಶ.೧೩೦೧ರಿಂದ, ಹೊಯ್ಸಳ ಸಾಮ್ರಾಜ್ಯವು ಒಬ್ಬ ಅರಸನ ಅಂಕೆಗೆ ಬಂತು.

ಕ್ರಿ.ಶ.೧೨೯೧–೧೩೪೨ರವರೆಗೂ, ಮುಮ್ಮಡಿ ಬಲ್ಲಾಳನು ಸುಮಾರು ಐದು ದಶಕಗಳಿಗೂ ಹೆಚ್ಚಿನ ಅವಧಿಯವರೆಗೂ ರಾಜ್ಯವಾಳಿದನು.ಈತನ ಆಳ್ವಿಕೆಯಲ್ಲಿ, ಕಳೆದುಹೋದ ರಾಜ್ಯವನ್ನು ಮರಳಿ ಪಡೆಯುವ ಅನಿವಾರ್ಯತೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಧೈರ್ಯದಿಂದ ಸಂದರ್ಭವನ್ನು ಎದುರಿಸಿದನು.ದುರದೃಷ್ಟವಶಾತ್, ಉತ್ತರದಲ್ಲಿ ಅಂದಿನ ಕಾಲದ ಬದಲಾವಣೆಗಳು ಅವನಿಗೆ ಗೋಚರವಾಗಲಿಲ್ಲ ಹಾಗೂ ಅದನ್ನು ಅರಿತುಕೊಳ್ಳುವ ವೇಳೆಗೆ, ಸಂದರ್ಭಕ್ಕನುಗುಣವಾಗಿ ಕಾರ್ಯಶೀಲನಾಗಲು ಆತನ ವಯಸ್ಸು ಮೀರಿದ್ದು ಬಹಳ ಮುದುಕನಾಗಿದ್ದನು.ಅವನ ಜೀವನದ ಅಂತ್ಯದ ವೇಳೆಗೆ, ಹೊಸ ರಾಜ್ಯವೊಂದರ ಉದಯವನ್ನು ನೋಡುವ ಹಾಗೂ ಅದು ದಕ್ಷ ರೀತಿಯಲ್ಲಿ ಸಂಪೂರ್ಣ ದಕ್ಷಿಣ ಭಾರತವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮಹತ್ತರವಾದ ಸಮಾಧಾನವನ್ನು ಅನುಭವಿಸಿದನು.ರಾಜ್ಯವನ್ನು ವಿದೇಶೀ ಕಡಿವಾಣದಿಂದ ತಪ್ಪಿಸಿದ್ದಲ್ಲದೆ, ರಾಜಕೀಯವಾಗಿ ಹೇಳುವುದಾದರೆ ಭಾರತೀಯ ಸಂಸ್ಕೃತಿಗೆ ಒದಗಿದ ಗಂಡಾಂತರವನ್ನೂ ತಪ್ಪಿಸಲಾಯಿತು.

ಉತ್ತರದ ದೆಹಲಿಯಲ್ಲಿ, ಸುಲ್ತಾನೀ ಆಳ್ವಿಕೆಯು ಸ್ಥಾಪಿತವಾಗಿದ್ದು ಬಲ್ಲಾಳನು ಹೊಯ್ಸಳ ಸಿಂಹಾಸನವನ್ನು ಅಲಂಕರಿಸುವ ಮುನ್ನ, ಜಲಾವುದ್ದೀನ್ ಖಿಲ್ಜಿಯು ದೆಹಲಿಯಲ್ಲಿ ಸುಲ್ತಾನನಾಗಿ ಆಳುತ್ತಿದ್ದನು. ಅವನ ಯುವ ಹಾಗೂ ಮಹತ್ವಾಕಾಂಕ್ಷಿ ಸೋದರಳಿಯನಾದ ಅಲಾವುದ್ದೀನನನ್ನು, ರಾಜಧಾನಿಯಿಂದ ಸ್ವಲ್ಪ ದೂರದಲ್ಲಿದ್ದ ಖಾರ್ ಪ್ರಾಂತಕ್ಕೆ ಕಳುಹಿಸಲಾಗಿತ್ತು. ಖಾರ್‌ದಿಂದ, ಸೇವುಣರು ಹಾಗೂ ವಾರಂಗಲ್‌ನ ಕಾಕತೀಯರ ವಿರುದ್ಧ ಹಲವಾರು ದಂಡಯಾತ್ರೆಗಳನ್ನು ನಡೆಸಿದ್ದನು. ಆದರೆ ತಮ್ಮ ಮುಂದಿರುವ ಗಂಡಾಂತರದ ಅರಿವು ಈ ಅರಸರಿಗೆ ತಿಳಿಯಲೇ ಇಲ್ಲ.ಪದೇಪದೇ, ಆಕ್ರಮಣಶೀಲ ಹೊಡೆದಾಟಗಳಲ್ಲಿ ಪರಸ್ಪರ ತೊಡಗಿದ್ದರು.

ಕ್ರಿ.ಶ.೧೨೯೬ರಲ್ಲಿ, ಸೇವುಣರ ರಾಜಧಾನಿಯಾದ ದೇವಗಿರಿಯ ಮೇಲೆ ಆಕ್ರಮಣ ಮಾಡಿದ ಅಲ್ಲಾವುದ್ದೀನ್ ಖಿಲ್ಜಿಯು ಅಪಾರ ಸಂಪತ್ತನ್ನು ದೋಚಿಕೊಂಡು ಹೋದನು.ನಂತರ ಕ್ರಿ.ಶ.೧೩೦೧ ಹಾಗೂ ೧೩೦೨ರಲ್ಲಿ, ಹೊಯ್ಸಳರ ಮೇಲೆ ಧಾಳಿ ಮಾಡಿದನು.ಸೇವುಣರ ಪರವಾಗಿ ಆನೆಗೊಂದಿಯ ಮುಖ್ಯಸ್ಥನಾದ ಕಂಪಿಲದೇವ ಹಾಗೂ ಹೊಳಲ್ಕೆರೆಯಲ್ಲಿ ತನ್ನ ಜೀವವನ್ನು ಕಳೆದುಕೊಂಡ ಹೊಯ್ಸಳ ಸೇನಾಧಿಪತಿಯಾದ ಸೋಮಯನ ನಡುವೆ ಯುದ್ಧ ನಡೆಯಿತು. ಕ್ರಿ.ಶ.೧೩೦೮ರಲ್ಲಿ, ರಾಜನ ನೇತೃತ್ವದಲ್ಲಿ ಹೊಯ್ಸಳ ಸೈನ್ಯವು ಲಕ್ಕುಂಡಿಯ ಕೋಟೆಗೆ ಲಗ್ಗೆ ಇಟ್ಟಿತು. ಹಾನಗಲ್‌ನ ಕದಂಬರ ಮುಖ್ಯಸ್ಥನಾದ ಕಾಮದೇವನೊಡನೆ ಸಿರಸಿಯಲ್ಲಿ ಕ್ರಿ.ಶ.೧೩೦೦ರಲ್ಲಿ ಒಮ್ಮೆ ಹಾಗೂ  ಕ್ರಿ.ಶ.೧೩೦೨ರಲ್ಲಿ, ಹೊಯ್ಸಳರು ಯುದ್ಧ ಮಾಡಿದರು.ಸುಂದರ ಪಾಂಡ್ಯನ ಪರವಾಗಿ ಪಾಂಡ್ಯ ರಾಜಕಾರಣದಲ್ಲಿ ಮುಮ್ಮಡಿ ಬಲ್ಲಾಳನು ಮಧ್ಯಸ್ಥಿಕೆ ವಹಿಸಿದರೂ, ತನ್ನದೇ ರಾಜ್ಯದ ಉತ್ತರದಲ್ಲಿ ಎದುರಾಗಿದ್ದ ದಿಗಿಲು ಹುಟ್ಟಿಸುವ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಲೇ ಇಲ್ಲ.




*ಶಾಂತಿವಾಥ ಬಸದಿ, ಹಳೇಬೀಡು, ಹಾಸನ ಜಿಲ್ಲೆ*

ಹೊಯ್ಸಳರ ರಾಜಧಾನಿ ದ್ವಾರಸಮುದ್ರ ಮತ್ತು ಕೋರಮಂಡಲ ಕರಾವಳಿಯೂ ಸೇರಿದಂತೆ ದಕ್ಷಿಣ ಒಳನಾಡಿನ ಮೇಲಿನ ಧಾಳಿಗೆ ಕ್ರಿ.ಶ.೧೩೧೧ರಲ್ಲಿ ಅಲ್ಲಾವುದ್ದೀನನು ತನ್ನ ಸೇನಾಧಿಪತಿಯಾದ ಮಲ್ಲಿಕಾಫರನನ್ನು ನಿಯೋಜಿಸಿದನು. ಸೇನಾಧಿಪತಿಯಾದ ಪರಶುರಾಮ ದಳವಾಯಿಯನ್ನು ಮಾರ್ಗದರ್ಶಿಯಾಗಿ ಕಳುಹಿಸಿದ ಸೇವುಣ ಅರಸನಾದ ರಾಮಚಂದ್ರನಿಂದ ಸೇನಾಧಿಪತಿ ಮಲ್ಲಿಕಾಫರನ ನೆರವನ್ನು ಪಡೆದನು. ದಕ್ಷಿಣಕ್ಕೆ ತೆರಳಿದ್ದ ಬಲ್ಲಾಳನು, ತನ್ನ ರಾಜಧಾನಿಗೆ ವೇಗವಾಗಿ ಮರಳಿ, ಮಲ್ಲಿಕಾಫರನಿಗೆ ಕಡು ವಿರೋಧವನ್ನು ನೀಡಿದನು.ಮುಸಲ್ಮಾನ ಸೈನ್ಯವು ಹೆಚ್ಚು ಬಲಶಾಲಿಯಾಗಿ ಪರಿಣಮಿಸಿ, ಬಲ್ಲಾಳನು ದೊಡ್ಡ ಕಪ್ಪವನ್ನೇ ನೀಡಬೇಕಾಯಿತು. ಮಲ್ಲಿಕಾಫರನು, ದಕ್ಷಿಣಕ್ಕೆ ಮತ್ತಷ್ಟು ಮುನ್ನಡೆಯುವ ತನ್ನ ಯತ್ನಕ್ಕೆ ನೆರವು ನೀಡುವಂತೆ ಬಲ್ಲಾಳನನ್ನು ಬಲವಂತ

ಮಾಡಿದನು.ಪಾಂಡ್ಯ ವೈರಿಗಳಿಬ್ಬರೂ ಪಲಾಯನ ಮಾಡಿದಾಗ, ಅವರ ರಾಜ್ಯಗಳ ನಗರ ಹಾಗೂ ದೇವಾಲಯಗಳಿಗೆ ಶತ್ರು ಸೈನ್ಯವು ಧಾಳಿಇಟ್ಟು ಲೂಟಿ ಮಾಡಲು ಅನುವು ಮಾಡಿಕೊಟ್ಟಂತಾಯಿತು – ಲಗ್ಗೆಯಿಟ್ಟ ಸೈನ್ಯವು ದೆಹಲಿಗೆ ಹಿಂತಿರುಗಿದ್ದು ಆ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ! ಹೊಯ್ಸಳರಿಗೆ ಇದು ದೊಡ್ಡ ಪೆಟ್ಟಾಯಿತು; ಕಾರಣ ಆ ವೈರಿಯು ಮುಮ್ಮಡಿ ಬಲ್ಲಾಳನ ಮಗನಾದ ವಿರೂಪಾಕ್ಷ ಬಲ್ಲಾಳನನ್ನು ಖಿಲ್ಜಿಗಳ ಆಸ್ಥಾನಕ್ಕೆ ತಮ್ಮೊಂದಿಗೆ ಕರೆದುಕೊಂಡು ಹೋದರು. ಆದರೆ, ಅವನನ್ನು ಗೌರವದಿಂದ ಬರಮಾಡಿಕೊಂಡು, ಸತ್ಕಾರ ಮಾಡಿ, ಕ್ರಿ.ಶ.೧೩೧೩ರ ವೇಳೆಗೆ ಆತನನ್ನು ರಾಜಧಾನಿಗೆ ಮರಳಿ ಕಳುಹಿಸಲಾಯಿತು. ಆದರೂ, ಬಲ್ಲಾಳನು ತನ್ನ ಕಾರ್ಯನೀತಿಯನ್ನು ಬದಲಾಯಿಸಲಿಲ್ಲ. ಮುಸಲ್ಮಾನರ ಧಾಳಿಯನ್ನು ಮುಗಿದ ಅಧ್ಯಾಯವೆಂದು ತಪ್ಪಾಗಿ ಗ್ರಹಿಸಿ, ಪಾಂಡ್ಯ ರಾಜ್ಯದ ವಿರುದ್ಧ ತನ್ನ ಪ್ರತಿಕೂಲ ಚಟುವಟಿಕೆಗಳನ್ನು ಮುಂದುವರಿಸಿದಾಗ ಕಣದಲ್ಲಿ ಇತರ ಅನೇಕರು ಸೇರ್ಪಡೆಯಾಗಿದ್ದರು.ವೀರ ಪಾಂಡ್ಯನು ಕೇರಳದ ರವಿವರ್ಮ ಕುಲಶೇಖರನ ನೆರವನ್ನು ಅರಸಿದರೆ, ಆತನ ಎದುರಾಳಿಯು ಕಾಕತೀಯ ಪ್ರತಾಪರುದ್ರ ಹಾಗೂ ಮುಮ್ಮಡಿ ಬಲ್ಲಾಳನ ನೆರವನ್ನು ಪಡೆದುಕೊಂಡನು. ಸುಂದರ ಪಾಂಡ್ಯನು ಮೇಲುಗೈ ಸಾಧಿಸಿದನು, ಆದರೆ ಅರುಣಸಮುದ್ರದ (ತಿರುವಣ್ಣಾಮಲೈ) ಸುತ್ತಲಿನ ಪ್ರದೇಶಗಳನ್ನು ಹೊಯ್ಸಳರಿಗೆ ಬಿಟ್ಟುಕೊಡುವ ಮೂಲಕ, ಆತನು ದೊಡ್ಡ ಬೆಲೆಯನ್ನೇ ತೆರಬೇಕಾಯಿತು.ಅದಾದ ನಂತರ, ಬಲ್ಲಾಳನು ಈ ಸ್ಥಳವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ಕ್ರಿ.ಶ.೧೩೧೮ರ ವೇಳೆಗೆ, ಸೇವುಣ ರಾಜ್ಯವು ಪರಾಧೀನವಾಗಿ, ದೆಹಲಿಯ ಪ್ರಾಂತವಾಯಿತು. ಕರ್ನಾಟಕದಲ್ಲಿ ಆ ವೇಳೆಗೆ, ಕುಮಮ್ಮಟದುರ್ಗವನ್ನು ರಾಜಧಾನಿಯನ್ನಾಗಿ ಹೊಂದಿದ್ದ ಕಂಪಿಲಿ ಎಂಬ ಸಣ್ಣ ರಾಜ್ಯವು ಅಧಿಕಾರಕ್ಕೆ ಬಂದು, ಸೇವುಣ ಹಾಗೂ ಹೊಯ್ಸಳರ ಪ್ರದೇಶಗಳ ನಡುವೆ ತಟಸ್ಥ ರಾಜ್ಯವಾಗಿ ಪಾತ್ರವಹಿಸಿತು. ಕ್ರಿ.ಶ.೧೨೮೦–೧೩೦೦ರವರೆಗೂ ಆಳಿದ ಮುಮ್ಮಡಿ ಸಿಂಗೇಯನಾಯಕನು, ಬಲ್ಲಕುಂದೆ ವಿಭಾಗದ ದೊರವಾಡಿಯನ್ನು ತನ್ನ ಭದ್ರಕೋಟೆಯಲ್ಲಿ ಒಂದಾಗಿ ಮಾಡಿಕೊಂಡಿದ್ದನು. ಆದರೆ ಸದ್ದಿಲ್ಲದೆ ನಿಧಾನವಾಗಿ ತನ್ನ ರಾಜ್ಯಕ್ಕೆ ಚಿತ್ರದುರ್ಗ ಜಿಲ್ಲೆಯ ಭಾಗಗಳನ್ನು ಸೇರ್ಪಡೆ ಮಾಡಿಕೊಂಡುದರ ಪರಿಣಾಮವಾಗಿ ಗಡಿಯು ಹರಿಹರದವರೆಗೂ ತಲುಪಿತ್ತು. ಕ್ರಿ.ಶ.೧೩೦೦–೨೭ರವರೆಗೂ ಆಳಿದ ಆತನ ಮಗನಾದ ಕಂಪಿಲದೇವ ಉರುಫ್ ಖಂಡೇಯರಾಯನು, ಸೇವುಣ ರಾಮಚಂದ್ರನ ಮಿತ್ರರಾಜನಾಗಿ, ರಣರಂಗದಲ್ಲಿ ಹೊಯ್ಸಳರನ್ನು ಎದುರಿಸಿದ್ದನು. ಅದರೆ ಸೇವುಣ ರಾಜನ ಮರಣವು ಇವನ ರಾಜ್ಯವನ್ನು ವಿಸ್ತರಿಸಿಕೊಳ್ಳುವ ಅವಕಾಶವನ್ನು ನೀಡಿತು. ತತ್ಪರಿಣಾಮವಾಗಿ ಕರ್ನಾಟಕದಲ್ಲಿ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳ ಕೆಲವು ಭಾಗ ಹಾಗೂ ಆಂಧ್ರ ಪ್ರದೇಶದ ಅನಂತಪುರಂ ಜಿಲ್ಲೆಯನ್ನು ಕಂಪಿಲರಾಮನು ಆಕ್ರಮಿಸಿಕೊಂಡನು. ಇದರಿಂದಾಗಿ ಮಲ್ಲಿಕಾಫರ್‌ನ ಧಾಳಿಯನ್ನು ಎದುರಿಸುವ ಸರದಿಯು (ಕ್ರಿ.ಶ.೧೩೧೪) ಕಂಪಿಲದ ಸರದಿಯಾಯಿತು. ಕ್ರಿ.ಶ.೧೩೨೦ರಲ್ಲಿ, ಬಲ್ಲಾಳನು ಕಂಪಿಲನ ಮೇಲೆ ಧಾಳಿ ಮಾಡಿದನು; ಆತನು ಏತನ್ಮಧ್ಯೆ ತನ್ನ ಧೈರ್ಯಶಾಲಿ ಮಗನಾದ ರಾಮನಾಥನ ನೆರವಿನಿಂದ, ಹೊಯ್ಸಳ ಧಾಳಿಯನ್ನು ತಡೆದನು. ಒಂದೇ ವರ್ಷದೊಳಗೆ, ಅಂದರೆ ಕ್ರಿ.ಶ.೧೩೨೧ರಲ್ಲಿ, ದೆಹಲಿಯಲ್ಲಿ ಖಿಲ್ಜಿಗಳ ಸ್ಥಾನಕ್ಕೆ ತುಘಲಕರು ಬಂದರು. ನೂತನ ಸುಲ್ತಾನನಾದ ಘಿಯಾಸುದ್ದೀನನು ಕಾಕತೀಯರಿಂದ ಸಲ್ಲಬೇಕಾದ ಕಪ್ಪದ ಬಾಕಿ ಮೊತ್ತವನ್ನು ಪಡೆದುಕೊಳ್ಳುವ ಸೋಗಿನಲ್ಲಿ, ತನ್ನ ಮಗನಾದ ಉಲುಘ ಖಾನ್, ಅಂದರೆ ಭಾವೀ ಮುಹಮ್ಮದ್–ಬಿನ್–ತುಘ್‌ಲಕ್‌ನನ್ನು ದೊಡ್ಡ ಸೈನ್ಯದೊಂದಿಗೆ ದಕ್ಷಿಣಕ್ಕೆ ಕಳುಹಿಸಿದನು. ಎರಡನೆಯ ಯತ್ನದಲ್ಲಿ, ಸೇನೆಯು ವಾರಂಗಲ್ಲನ್ನು ವಶಕ್ಕೆ ತೆಗೆದುಕೊಂಡು, ಪ್ರತಾಪರುದ್ರನನ್ನು ಸೆರೆಯಾಳಾಗಿಸಿಕೊಂಡರು. ದೆಹಲಿಗೆ ಹೋಗುವ ಮಾರ್ಗ ಮಧ್ಯದಲ್ಲಿ, ಕೊನೆಯ ಕಾಕತೀಯ ರಾಜನು ಕ್ರಿ.ಶ.೧೩೨೩ರಲ್ಲಿ ಆತ್ಮಹತ್ಯೆ ಮಾಡಿಕೊಂಡನು. ಎರಡು ವರ್ಷಗಳ ಒಳಗೆ, ಮುಹಮ್ಮದ್–ಬಿನ್–ತುಘ್‌ಲಕ್ ದೆಹಲಿಯ ಸಿಂಹಾಸನವನ್ನು ಏರುತ್ತಿದ್ದಂತೆ ಕ್ರಿ.ಶ.೧೩೨೭ರಲ್ಲಿ, ದಕ್ಷಿಣಕ್ಕೆ ಸೇನಾ ತುಕಡಿಯೊಂದನ್ನು ಕಳುಹಿಸಿದನು. ಈ ಬಾರಿ, ಅವರ ಉದ್ದೇಶವು ಲೂಟಿ ಮಾಡುವುದಾಗಿರದೆ, ಗೆಲ್ಲುವ ಉದ್ದೇಶವನ್ನು ಹೊಂದಿದ್ದರು. ಸೇವುಣರು ಹಾಗೂ ಕಾಕತೀಯರು ಆದಾಗಲೇ ಪತನವಾಗಿದ್ದರು. ಬಲ್ಲಾಳನು, ಶತ್ರುವನ್ನು ಎದುರಿಸಲಾಗದೆ, ತಿರುವಣ್ಣಾಮಲೈಯಲ್ಲಿ ಆಶ್ರಯ ಪಡೆದನು. ಆತನ ರಾಜಧಾನಿಯು ಲೂಟಿ ಹಾಗೂ ವಿನಾಶಕ್ಕೆ ತೆರೆದಿಟ್ಟಂತೆ ಆಯಿತು. ಆನಂತರ, ಆಕ್ರಮಣಕಾರನು ಮತ್ತಷ್ಟು ದಕ್ಷಿಣದತ್ತ ನುಗ್ಗಿ, ಪಾಂಡ್ಯ ರಾಜಧಾನಿಯಾದ ಮಧುರೈಯನ್ನು ತನ್ನದಾಗಿಸಿಕೊಂಡನು. ಈ ರೀತಿಯಲ್ಲಿ, ಕ್ರಿ.ಶ.೧೩೩೦ರ ವೇಳೆಗೆ, ಕೇವಲ ಹೊಯ್ಸಳ ರಾಜ್ಯ ಹಾಗೂ ಕಂಪಿಲದ ಸಣ್ಣ ರಾಜ್ಯವು ಮಾತ್ರ ಸ್ವತಂತ್ರವಾಗಿ ಉಳಿದಿತ್ತು.

ಕಂಪಿಲದ ಮೇಲೆ ಮೂರು ಬಾರಿ ಧಾಳಿ ನಡೆದು ಅಂತಿಮ ಸೆಣೆಸಾಟದಲ್ಲಿ, ಕಂಪಿಲ ಹಾಗೂ ಆತನ ಮಗನಾದ ರಾಮನಾಥರು



ನರಸಿಂಹಾ ದೇವಾಲಯ, ಮೇಲಕೋಟೆ, ಮಂಡ್ಯ ಜಿಲ್ಲೆ

ವೀರಾವೇಶದಿಂದ ಹೋರಾಡಿ, ಆ ಪ್ರಕ್ರಿಯೆಯಲ್ಲಿ ತಮ್ಮ ಜೀವವನ್ನು ಕಳೆದುಕೊಂಡರು.ಕಂಪಿಲ, ಅದರಲ್ಲೂ ವಿಶೇಷವಾಗಿ ಆತನ ಮಗನಾದ ರಾಮನಾಥನು ಲಾವಣಿ ಹಾಗೂ ಹಾಡುಗಬ್ಬಗಳು ಹಾಗೂ ಕುಮಾರ ರಾಮನ ಕಥೆಯಂತಹ ಸಾಹಿತ್ಯ ಕೃತಿಗಳ ಮೂಲಕ, ಕರ್ನಾಟಕದ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ.


ಮುಹಮ್ಮದ್–ಬಿನ್–ತುಘಲಕ್‌ನು, ಬಲ್ಲಾಳನಲ್ಲಿ ಆಶ್ರಯವನ್ನು ಪಡೆದ ದಂಗೆಕೋರನೊಬ್ಬನನ್ನು ಹಿಂಬಾಲಿಸುತ್ತಾ, ದೋರಸಮುದ್ರದತ್ತ ನಡೆದನು. ಆ ವೇಳೆಗಾಗಲೇ, ಬಲ್ಲಾಳನು ಮುಸಲ್ಮಾನ ಸೈನ್ಯ ಬಲದ ಚುರುಕನ್ನು ಅನುಭವಿಸಿದ್ದರಿಂದ, ಆ ದಂಗೆಕೋರನನ್ನು ನಿರ್ದಯದಿಂದ ಆತನ ಸ್ವಾಮಿಗೆ ಒಪ್ಪಿಸಿದನು; ಅವನು ಆತನಿಗೆ ಮರಣದಂಡನೆ ವಿಧಿಸಿದನು. ಈ ರೀತಿಯಲ್ಲಿ, ತಮ್ಮ ರಾಜ್ಯಕ್ಕೆ ಒದಗಿದ ಗಂಡಾಂತರದಿಂದ ಮೂರನೆಯ ಬಲ್ಲಾಳನು ತಪ್ಪಿಸಿಕೊಂಡರೂ. ಸಂಪೂರ್ಣವಾಗಿ ಶತ್ರುವನ್ನು ಹೊಡೆದೋಡಿಸಬೇಕಾದರೆ, ಸಂಘಟಿತ ಯತ್ನಗಳು ಅಗತ್ಯವೆಂದು ಈಗಾಗಲೇ ಅರಿತಿದ್ದನು, ಏಕೆಂದರೆ, ಮುಸ್ಲಿಮರು ಇಲ್ಲಿ ನೆಲೆಸಲು ಬಂದಿರುವುದಲ್ಲದೆ, ಸೋತವರ ಮೇಲೆ ಬಲವಂತದಿಂದ ಹೇರಲು, ತಮ್ಮೊಡನೆ ಧರ್ಮವೊಂದನ್ನೂ ತಂದಿದ್ದರು.ಸಂಘಟಿತ ಯತ್ನದ ಮೂಲಕ, ದೇಶವನ್ನೂ ಹಾಗೂ ಅದರ ಸಂಸ್ಕೃತಿಯನ್ನೂ ಉಳಿಸಲು ಬಲ್ಲಾಳನು ಮನಸ್ಸು ಮಾಡಿದನು. ಹಾಗಾಗಿ, ದೇಶವನ್ನು ಮುಕ್ತವಾಗಿಸುವಲ್ಲಿ ಅದೇ ರೀತಿಯ ಯತ್ನಗಳನ್ನು ಮಾಡುತ್ತಿದ್ದ ಆಂಧ್ರ ಪ್ರದೇಶದ ಮುಖಂಡರಾದ ಪ್ರೋಲನಾಯಕ ಹಾಗೂ ಆತನ ಸೋದರಸಂಬಂಧಿಯಾದ ಕಾಪನಾಯಕನ ಹೋರಾಟಕ್ಕೆ ನೆರವನ್ನು ಒದಗಿಸಿದನು. ಆತನ ನೆರವಿನಿಂದ, ತೆಲಂಗಾಣದ ರಾಜ್ಯಪಾಲನಾದ ಮಲಿಕ್ ಮಕ್ಬೂಲನನ್ನು ಹೊಡೆದೋಡಿಸುವಲ್ಲಿ ಯಶಸ್ವಿಯಾದರೂ ಅವನು ದೆಹಲಿಗೆ ಹಿಂತಿರುಗಬೇಕಾಯಿತು. ಶಂಭುವರಾಯನ ಕುಟುಂಬದ ಸುಪರ್ದಿಗೆ ಒಪ್ಪಿಸಲಾಗಿದ್ದ ಮಲಬಾರ್ ಪ್ರದೇಶದಲ್ಲಿದ್ದ ಸೈನ್ಯವನ್ನು ಸ್ವತಃ ಬಲ್ಲಾಳನೇ ಸೋಲಿಸಿದನು.ಆತನ ರಾಜ್ಯದಲ್ಲೇ, ತನ್ನ ಇಳಿವಯಸ್ಸನ್ನು ಗಮನದಲ್ಲಿರಿಸಿಕೊಂಡು, ತನ್ನ ಸಾಮಂತರನ್ನು ಸ್ವತಂತ್ರವಾಗಿ ಪ್ರವರ್ತಿಸಲು ಉತ್ತೇಜಿಸಿದನು. ರಾಜ್ಯದ ಉತ್ತರ ಪ್ರಾಂತದ ಹೊಣೆಗಾರಿಕೆಯನ್ನು ಹರಿಹರ ಹಾಗೂ ಆತನ ನಾಲ್ಕು ಸಹೋದರರಿಗೆ ಒಪ್ಪಿಸಿದನು. ಇದೇ ಸಮಯದಲ್ಲಿ, ಮಧುರೈನ ಸುಲ್ತಾನನಾಗಿ ಜಲಾಲುದ್ದೀನ್ ಹಸನ್ ಶಾಹ್‌ನ ತರುವಾಯ ಬಂದ ಅಲ್ಲಾವುದೀನ್ ಉಡಾಜಿಯು, ಕ್ರಿ.ಶ.೧೩೪೦ರಲ್ಲಿ ಹೊಯ್ಸಳ ರಾಜ್ಯದ ಮೇಲೆ ಆಕ್ರಮಣ ಮಾಡಿದನು. ಕ್ರಿ.ಶ.೧೩೪೨ರಲ್ಲಿ ಕಣ್ಣನೂರು ಕೋಟೆಗೆ ಮುತ್ತಿಗೆ ಹಾಕಿದ ಹೊಯ್ಸಳರು, ಶತ್ರುಗಳು ಶಾಂತಿ ಸಂಧಾನವನ್ನು ಪ್ರಾರಂಭಿಸುವಂತೆ ಒತ್ತಡ ಹೇರಿದರು. ಮಧುರೈನ ನೂತನ ರಾಜ್ಯಪಾಲನೊಂದಿಗೆ ಸಮಾಲೋಚನೆ ನಡೆಸಲು ಅವಕಾಶ ನೀಡೆಂದು ಅವರು ಕೋರಿದಾಗ, ಅರಿಯದೆಯೇ ಅವರು ಒಪ್ಪಿಕೊಂಡಾಗ ಶತ್ರುಗಳಿಗೆ ತಮ್ಮ ಸೈನ್ಯವನ್ನು ಪುನರ್‌ಸಂಘಟನೆ ಮಾಡಿಕೊಳ್ಳಲು ಅವಕಾಶ ದೊರೆತಂತಾಯಿತು.ಏಕಾಏಕಿಯಾಗಿ ಅವರು ಆಕ್ರಮಣ ನಡೆಸಿ, ಅಲ್ಪಸಮಯದಲ್ಲೇ ಹೊಯ್ಸಳ ಸೈನ್ಯವನ್ನು ಸೋಲಿಸಿ, ಮುಮ್ಮಡಿ ಬಲ್ಲಾಳನನ್ನು ಸೆರೆಹಿಡಿದರು. ಸುಲ್ತಾನನು ಅವನನ್ನು ಕೊಲ್ಲಿಸಿ, ಆತನ ಚರ್ಮದೊಳಗೆ ಹುಲ್ಲನ್ನು ತುಂಬಿಸಿ, ಅವನ ದೇಹವನ್ನು ಮಧುರೈನ ದ್ವಾರದ ಬಳಿಯಲ್ಲಿ ಪ್ರದರ್ಶಿಸಿದನು.ಇಬ್ನ ಬಟೂಟನು ಇದನ್ನು ಪುಷ್ಟೀಕರಿಸಿದ್ದಾನೆ.

ಶಾಸನಗಳ ಪ್ರಕಾರ, ಸೆಪ್ಟೆಂಬರ್ ೮, ಕ್ರಿ.ಶ.೧೩೪೨ರಂದು ಬಲ್ಲಾಳನು ಕಾಲವಾದಾಗ, ಅವನು ಎಂಭತ್ತು ವರ್ಷಗಳ ಹಣ್ಣುಹಣ್ಣು ಮುದುಕನಾಗಿದ್ದನು. ಈತನ ನಂತರ, ಅವನ ಅಸಮರ್ಥ ಮಗನಾದ ನಾಲ್ವಡಿ ವಿರೂಪಾಕ್ಷ ಬಲ್ಲಾಳನು ಪಟ್ಟವೇರಿದನು. ಆತನೇ ಹೊಯ್ಸಳರ ಅಂತಿಮ ಅರಸನಾದನು, ಏಕೆಂದರೆ, ಆ ವೇಳೆಗಾಗಲೇ, ಹರಿಹರ ಸಹೋದರರು, ವಿಜಯನಗರ ಸಾಮ್ರಾಜ್ಯದ ಬುನಾದಿಯನ್ನು ಹಾಕಿದ್ದರು.



*ಹೊಯ್ಸಳೇಶ್ವರ – ಕೇದಾರೇಶ್ವರ ದೇವಾಲಯದ ಪಾರ್ಶ್ವನೋಟ, ಹಳೇಬೀಡು, ಹಾಸನಜಿಲ್ಲೆ*

ಕರ್ನಾಟಕದ ಇತಿಹಾಸ ಪುಟಗಳಲ್ಲಿ ಹೊಯ್ಸಳರು, ಬಲಿಷ್ಠ ಅರಸರಾಗಿ ಮಾತ್ರವಲ್ಲ, ಕರ್ನಾಟಕದ ಸಂಸ್ಕೃತಿ ಹಾಗೂ ಕಲೆಗಳಿಗೆ ಆಶ್ರಯದಾತರಾಗಿ ಅಮರರಾಗಿದ್ದಾರೆ. ಸ್ವತಂತ್ರ ಹೊಯ್ಸಳ ಸಾಮ್ರಾಜ್ಯದ ಬುನಾದಿಯನ್ನು ಹಾಕುವುದಲ್ಲದೆ, ಕನ್ನಡ ಸಂಸ್ಕೃತಿಯು ಅರಳುವಲ್ಲಿ ಚಾಲನಾ ಶಕ್ತಿಯನ್ನು ವಿಷ್ಣುವರ್ಧನನು ನೀಡಿದನು. ಈ ರಾಜವಂಶದ ಹೆಸರನ್ನು ಹೊತ್ತ ವಾಸ್ತು ನಿರ್ಮಾಣ ಶೈಲಿಯು ಈ ಅವಧಿಯಲ್ಲಿ ವೃದ್ಧಿಯಾಯಿತು. ಆತನಿಗೆ ಯೋಗ್ಯಳಾದ ಸತಿ ಶಾಂತಲಾ, ಸಂಸ್ಕೃತಿ ಹಾಗೂ ಕಲೆಗಳೇ ಮೈವೆತ್ತಂತಿದ್ದಳು. ಈ ಕಾಲವು ಪೌರುಷಕ್ಕೆ ಮುಡಿಪಾಗಿಟ್ಟ ಕಾಲವಾಗಿತ್ತು – ಲೆಂಕರು, ಅಂಕಕಾರರು, ವೇಳೆವಾಳಿಗಳು, ಹಾಗೂ ಗರುಡರಂತಹ ವಿವಿಧ ವರ್ಗದ ವೀರ ಯೋಧರು, ತಮ್ಮ ಒಡೆಯರಿಗೆ ತೋರಿದ ಅಚಲವಾದ ಶ್ರದ್ಧೆ ಹಾಗೂ ಸ್ವಾಮಿನಿಷ್ಠೆಯು ಅವರವರ ಜೀವವನ್ನೇ ಆಳರಸರಿಗೆ ಮುಡಿಪಾಗಿಡುವ ಮೂಲಕ ಪರಾಕಾಷ್ಠೆ ತಲುಪಿತು.ಅತ್ಯಂತ ಜನಪ್ರಿಯ ಧರ್ಮಗಳಾದ ಜೈನ, ಶೈವ, ವೈಷ್ಣವ, ಇತ್ಯಾದಿ ಮತಗಳು, ಸಹಬಾಳ್ವೆಯಿಂದ ಏಳಿಗೆ ಹೊಂದಿ, ರಾಜಾಶ್ರಯವನ್ನು ಪಡೆಯುವ ಮೂಲಕ, ಧಾರ್ಮಿಕ ಸಹಿಷ್ಣುತೆ ಮೆರೆದು, ಈ ಕಾಲಘಟ್ಟದ ಹೆಗ್ಗುರುತಾಗಿ ಮೂಡಿತು.


ಹೊಯ್ಸಳ ಲಾಂಛನ, ಚನ್ನಕೇಶವ ದೇವಾಲಯ, ಬೇಲೂರು, ಹಾಸನ ಜಿಲ್ಲೆ

ರಾಮಾನುಜಾಚಾರ್ಯರಿಂದ, ಶ್ರೀವೈಷ್ಣವ ಮತಕ್ಕೆ ವಿಷ್ಣುವರ್ಧನನು ಮತಾಂತರಗೊಂಡನೆಂದು ಸಾಂಪ್ರದಾಯಿಕವಾಗಿ ನಂಬಲಾಗಿದೆ.ಸಮಕಾಲೀನ ಸಾಕ್ಷಿಗಳಿಂದ ಮತಾಂತರದ ಕಥೆಯು ಸಾಬೀತಾಗದೆ ಉಳಿದಿದ್ದರೂ, ಈ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದ, ಹಲವಾರು ಸಂಖ್ಯೆಯ ಶ್ರೀವೈಷ್ಣವ ದೇವಾಲಯಗಳು, ರಾಮಾನುಜರು ಹಾಗೂ ಅವರ ಸಿದ್ಧಾಂತವು ಕರ್ನಾಟಕದ ಈ ಭಾಗದಲ್ಲಿ ಪ್ರಭಾವ ಬೀರಿತ್ತು ಎನ್ನುವುದಕ್ಕೆ, ಉತ್ತಮ ನಿದರ್ಶನಗಳಿವೆ.ತೊಣ್ಣೂರು ಹಾಗೂ ಮೇಲುಕೋಟೆಗಳು ಶ್ರೀವೈಷ್ಣವರ ಪ್ರಮುಖ ಕೇಂದ್ರಗಳಾಗಿದ್ದವು. ಇದೇ ಸಮಯದಲ್ಲಿ, ವೈಷ್ಣವ ಸಿದ್ಧಾಂತವೆಂದೂ ಕರೆಯಲ್ಪಡುವ, ಮಧ್ವಾಚಾರ್ಯ (ಕ್ರಿ.ಶ.೧೨೩೮–೧೩೧೭) ಪ್ರತಿಪಾದಿತವಾದ ದ್ವೈತ ಪದ್ಧತಿಯೂ ಹೊರಹೊಮ್ಮಿತು. ಈ ಚಿಂತನೆಗಳ ಮೂಲ ಅಂಶವೆಂದರೆ, ಶ್ರದ್ಧೆ ಅಥವಾ ಭಕ್ತಿಯನ್ನು ಒಂದು ಪಂಥವೆಂದೇ ಪರಿಗಣಿಸಲಾಗುತ್ತಿತ್ತು. ಸಾಹಿತ್ಯ ಕ್ಷೇತ್ರದಲ್ಲೂ, ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಹಾಗೂ ಅವರ ಅನುಯಾಯಿಗಳು ಸಂಸ್ಕೃತದಲ್ಲಿ ಬರೆದ ಮಹಾನ್ ಸೈದ್ಧಾಂತಿಕ ಭಾಷ್ಯಗಳಲ್ಲದೆ, ಅದ್ವೈತ ಸಿದ್ಧಾಂತವನ್ನು ಕುರಿತು ಬರೆಯುವ ಉತ್ತಮ ಬರಹಗಾರರೂ ಇದ್ದರು.ಈ ಅವಧಿಯಲ್ಲೇ, ಹೊಯ್ಸಳ ರಾಜರ ಆಸ್ಥಾನದಲ್ಲಿ, ಜಾತ್ಯಾತೀತ ಸಾಹಿತ್ಯದ ರಚನೆಯೂ ಆಯಿತು. (ಇಂತಹ ಬರಹಗಾರರ ಕುಟುಂಬವೊಂದನ್ನು ಇಲ್ಲಿ ಉದಾಹರಿಸಬಹುದಾಗಿದ್ದು) ಅವರೆಲ್ಲರೂ, ವಿದ್ಯಾಚಕ್ರವರ್ತಿ ಎಂಬ ಬಿರುದನ್ನು ಪಡೆದ ಆಸ್ಥಾನ ಕವಿಗಳು. ಮಹಾನ್ ಶೈಕ್ಷಣಿಕ ಕೇಂದ್ರ ಮುಂತಾದವುಗಳ ಸ್ಥಾಪನೆಯ ಮೂಲಕ ದೊರೆತ ರಾಜಾಶ್ರಯದಿಂದ, ಕನ್ನಡ ಸಾಹಿತ್ಯವು ವೃದ್ಧಿಯಾಯಿತು.ನಾಗಚಂದ್ರ (ಅಭಿನವ ಪಂಪನೆಂದೂ ಆತನನ್ನು ವರ್ಣಿಸಲಾಗಿದೆ), ರಾಜಾದಿತ್ಯ, ಸುಮನೋಬಾಣ, ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ರುದ್ರಭಟ್ಟ, ನೇಮಿಚಂದ್ರ, ಕೇಶೀರಾಜ, ನಾಗಚಂದ್ರ, ಜನ್ನರಂತಹ ಹೆಸರಾಂತ ಕವಿಗಳು ರಚಿಸಿದ ಅತ್ಯುತ್ತಮ ಸಾಹಿತ್ಯ ಈ ಕಾಲದಲ್ಲಿ ಮೂಡಿಬಂತು.ಅಲ್ಲದೆ, ಶಾಸನಗಳ ರಚನೆಯನ್ನೂ ಈ ಕಾಲವು ಕಂಡಿತು. ಹಾಗಾಗಿ, ಹೊಯ್ಸಳರ ಆಳ್ವಿಕೆಯ ಈ ಅವಧಿಯು, ಕರ್ನಾಟಕ ಇತಿಹಾಸದ ಒಂದು ಪ್ರಮುಖ ಘಟ್ಟವಾಗಿದೆ.